ಅಪರಂಜಿ

ಜುಲೈ 97

ತಿಳಿನಗೆಯ ಕಾರಂಜಿ



ಪ್ರಕಾಶ್

ಬಿ. ಎಸ್. ಶೈಲಜಾ

ಸುಜಾತ ರಾಜಣ್ಣ

ಭೂಷಿ

ಶಿವು

ಝೂಯಿ ದ ಬೆರ್ನೀಸ್

ಶಿವರಾಮ ಕಾರಂತ

ತುರುವೇಕೆರೆ ಪ್ರಸಾದ್

ಡಾ॥ ಕೆ. ಜಿ. ಜಿ. ಮೂರ್ತಿ

ಎಂ. ಎನ್. ಕೆ.

ಬೇಲೂರು ರಾಮಮೂರ್ತಿ

ಬಿಡಿ ಪ್ರತಿ : 3 ರೂ. 50 ಪೈ



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್

ಚಂದಾ ವಿವರ:
ಬಿಡಿ ಪ್ರತಿ: ರೂ. 3.50
ವಾರ್ಷಿಕ ಚಂದಾ: ರೂ. 35
ಆಜೀವ ಚಂದಾ : ರೂ. 350

ವಿಳಾಸ: ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 14 **ಜುಲೈ '97** **ಸಂಚಿಕೆ- 10**

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



○ ಪ್ರಕಾಶ್

ಸೋನಿಯಾಗೆ ಪಕ್ಷದ ಹುದ್ದೆ

-ಸುದ್ದಿ

ಬಲವಂತ ಮಾಘಸ್ನಾನ!!

★★★

ಉತ್ತರ ಭಾರತದಲ್ಲಿ ಯಾದವ ಕಲಹ

ಕಲಿಯುಗದಲ್ಲೂ ಮರುಕಳಿಸುತ್ತಿದೆ!!

★★★

ಕರ್ನಾಟಕದ ಕ್ರೀಡಾಪಟುಗಳ ಮೇಲೆ ಲಾಠಿ ಚಾರ್ಜ್

-ಪತ್ರಿಕೆ

'ನೂತನ' ಕ್ರೀಡೆ??

★★★

ಕಾಂಗ್ರೆಸ್‌ನ ಮೊಳಕಾಲು ಮುರಿದ ಸುದ್ದಿ

ಕೇಳಿ ದಳದವರೆಲ್ಲ ಸಂತಸಗೊಂಡರು!!

★★★

ಬೇರೊಂದು ದೇಶದ ಭಯೋತ್ಪಾದಕರನ್ನು ನಾನು ಗೌರವಿಸಲಾರೆ

- ಪೆರು ಅಧ್ಯಕ್ಷ

ಇದಕ್ಕೆ ಅಪಾರ್ಥ ಕಲ್ಪಿಸುವುದು ಸುಲಭ!!

★★★

ಆಮದು ವಂಚನೆ; ಬಿ.ಎಚ್.ಇ.ಎಲ್. ಅಧಿಕಾರಿಗಳ ವಿರುದ್ಧ ಕ್ರಮ

- ಪತ್ರಿಕೆ

ಭಾರವಾದ ಸುದ್ದಿ!!

★★★

ಅಕ್ರಮ ಸಂಪತ್ತು; ಜಯಾ ವಿರುದ್ಧ ಆರೋಪ ಪಟ್ಟಿ

- ಸುದ್ದಿ

ನಂ ದೇಶದಲ್ಲಿ 'ಸಕ್ರಮ ಸಂಪತ್ತು' ಎಂದಿಗೆ ಬರುತ್ತೋ?.

★★★

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಜತೆ ಸಂಪರ್ಕ ಕಡಿತ

- ಅಮೆರಿಕನ್ ಸುದ್ದಿ

ಅಮೆರಿಕನ್ನರು 'ಟಾಟಾ' ಅನ್ನ ಬಾರದಿತ್ತು!

★★★



ಒಂದು ಪರ್ಲ್‌ಸೆಟ್ ಕೂಡಾ ಸರಿಯಾಗಿಲ್ಲ. VIDS ಗೆ ಹೋಗ್ತಾರಂತೆ! ಸಾಕು, ಸುಮ್ನಿರ್ರೀ!

ನೆರೆ, ... ಹೊರೆಯಾದರೆ.....?


- ಬಿ.ಎಸ್. ಶೈಲಜಾ

ಅಂತೂ ಇಂತೂ ಶ್ರೀಮಾನ್ ಮತ್ತು ಶ್ರೀಮತಿಯವರು ಗಣಪತಿಯನ್ನು ತರಲು ಹೊರಟೇಬಿಟ್ಟರು, ರಾತ್ರಿ ಒಂಭತ್ತು ಗಂಟೆಗೆ. ಮೂರು ದಿನದಿಂದ ಅದಕ್ಕಾಗಿ ಪ್ರೋಗ್ರಾಂ ಹಾಕಿದ್ದೂ ಹಾಕಿದ್ದೇ. ಗಣಪತಿ (''ತರೋದಕ್ಕೆ'')ಗೆ ನೂರೆಂಟು ವಿಘ್ನಗಳು. ಅಂದು ತರಲು ಹೊರಡದೇ ವಿಧಿ ಇರಲಿಲ್ಲ - ಏಕೆಂದರೆ ಮರುದಿನವೇ ಹಬ್ಬ!

ಇವರ ಸ್ಕೂಟರ್ ಅಂಗಡಿ ಬೀದಿ ತಲುಪಿದಾಗ ಅರ್ಧಕ್ಕರ್ಧ ಅಂಗಡಿಗಳು ಬಾಗಿಲು ಹಾಕಿಯಾಗಿತ್ತು. ಉಳಿದವರು ಇನ್ನೇನು ಮುಚ್ಚುವುದರಲ್ಲಿದ್ದರು. ಚೌಕಾಶಿಗೆ ಮನಸ್ಸಿಲ್ಲದವರು ಜಾಸ್ತಿ ಬೆಲೆ ಹೇಳಿ ಇವರನ್ನು ಸಾಗಹಾಕಿದರು. ಕೊನೆಗೆ ಒಬ್ಬ ''ಏನೋ ಸಾರ್ ಪಾಪ ತಡವಾಗಿ ಬಂದಿದ್ದೀರಿ. ಏನೋ ತೊಂದರೆ ಇದ್ದೀರಬೇಕು. ಇದೇ ಲಾಸ್ಟ್ ವ್ಯಾಪಾರ- ನಿಮಗೋಸ್ಕರ ಹತ್ತು ರೂಪಾಯಿ ಕಡಿಮೆ ಮಾಡುತ್ತೇನೆ'' ಎಂದಾಗ ಗಣಪತಿ ಸ್ಕೂಟರ್ ಏರಿದ. ಆದರೆ ವ್ಯಾಪಾರ ಮುಗಿಯಲಿಲ್ಲ. ಹೂವು, ಹಣ್ಣು, ಮಾವಿನಸೊಪ್ಪು ಇತ್ಯಾದಿ, ಇತ್ಯಾದಿ....

ಹತ್ತು ಗಂಟೆಗೆ ಪರಿವಾರ ಸಮೇತನಾಗಿ ಗಣಪತಿ ಬಾಗಿಲಬಳಿ ಬಂದಿಳಿದಾಗ ಮುದ್ದಿನ ಮಗಳು ಬಾಗಿಲಲ್ಲೇ ನಿಂತಿದ್ದಳು. ''ಇಷ್ಟು ಹೊತ್ನಲ್ಲಿ ಬಾಗಿಲಲ್ಲಿ ಒಬ್ಳೇ ಯಾಕೆ ನಿಂತಿದ್ದೀ? ಒಳಗಿರಬಾರದಾಗಿತ್ತಾ?'' ಎಂದು ಶ್ರೀಮತಿ ಗದರಿಕೊಂಡರು. ಮಗಳು ತಕ್ಷಣವೇ ''ನಾನೇನು ಒಬ್ಬಳೇ ಇರಲಿಲ್ಲ. ಸಿಲ್ಲಿ ಇದ್ದ. ಈಗ ಮನೆಗೆ ಹೋದ'' ಎಂದಳು.

ಸಿಲ್ಲಿ??



ಅವನು/ಅದು ಎದುರು ಮನೆಯ ನಾಯಿ. Silver ಎಂಬ ಹೆಸರಿನ ಅಪಭ್ರಂಶ ಈಚಿನ ಮಕ್ಕಳಿಗೆ ಇಂಗ್ಲೀಷ್ ಹುಚ್ಚು. ಹಾಗಾಗಿ ನಾಯಿ ಅವನು/ಅವಳು ಎಂದು ಕರೆಸಿಕೊಳ್ಳುತ್ತದೆ. ಈ ಸಿಲ್ಲಿ ಎಂಬ ನಾಯಿ ಪ್ರತಿ ಬೆಳಿಗ್ಗೆ ಮತ್ತು ರಾತ್ರಿ ''ವಾಕಿಂಗ್'' ಹೋಗುತ್ತದೆ. (ಇದನ್ನು ವಾಕಿಂಗ್ ಎಂದೇ ಕರೆಯಬೇಕಲ್ಲವೇ? ''ಅಸಭ್ಯ'' ಶಬ್ದಗಳನ್ನು ಉಪಯೋಗಿಸಬಾರದಲ್ಲ!) ಹಾಗೆ ಹೋಗುವಾಗಲೆಲ್ಲಾ ಇವಳು ಕಿಟಕಿಯಿಂದ 'ಹಾಯ್' ಎಂದು ವಿಶ್ ಮಾಡಲೇಬೇಕು. ಅದು ಕುಂಯ್‌ಗುಟ್ಟಿ ಬಾಲ ಅಲ್ಲಾಡಿಸಿ ಸ್ವೀಕರಿಸಲೇಬೇಕು. ಇದು ದಿನಂಪ್ರತಿಯ ಚರ್ಯೆ. ಈದಿನ ಇವಳು 'ಹಾಯ್' ಎನ್ನುವ ಹೊತ್ತಿಗೆ ಸರಿಯಾಗಿ ಅಂಕಲ್‌ಗೆ (ನಾಯಿಯ ಯಜಮಾನ) ಟ್ರಂಕ್‌ಕಾಲ್ ಬಂದಿತಂತೆ. ಆಗ ಸಿಲ್ಲಿಯ ಚೈನನ್ನು ಇವಳಿಗೆ ಕೊಟ್ಟು ಅಂಕಲ್ ಓಡಿದ್ದರಂತೆ.

ಇದು ಯಾವುದಕ್ಕೆ ಪ್ರಸ್ತಾವನೆ ಎಂದು ಶ್ರೀಮತಿಯವರು ಲೆಕ್ಕ ಹಾಕುತ್ತಿದ್ದ ಹಾಗೇ ಒಳಗೆ ಪ್ರವೇಶಿಸಿದರು ಅಂಕಲ್, ಆಂಟಿ ಮತ್ತು ಸಿಲ್ಲಿ.

''ಏನು ಈಗ ಗಣಪತಿ ತರ್ತಾ ಇದೀರಾ?'' ಎಂಬುದು ಯಾವುದಕ್ಕೆ ಪೀಠಿಕೆ? ಸಿಲ್ಲಿ ಸರ್ರನೆ ಮಗಳ ತೊಡೆ ಏರಿ ಕುಳಿತು, ತನ್ನ ಅಧಿಕಾರವನ್ನು ಪ್ರದರ್ಶಿಸಿತು.

''ನಾಳೆ ನಾವು ಊರಿಗೆ ಹೋಗಬೇಕಾಗಿದೆ'' ಎಂದಾಕೆ ಹಲ್ಲು ಕಿರಿದಾಗ ಶ್ರೀಮತಿಯವರು ತಬ್ಬಿಬ್ಬಾಗಿ, ''ನಾಳೆ?.... ಹಬ್ಬ.....?'' ಎಂದು ಬೆಬ್ಬೆಬ್ಬೆ ಎಂದರು. ''ನಮ್ಮ ಹುಡುಗನಿಗೆ Interview ಇದೆ. ಇಂಜಿನೀರಿಂಗ್‌ಗೆ.... ಇದೇ ಲಾಸ್ಟ್ ಚಾನ್ಸ್'' ಎಂದು ಹಲ್ಲು ಕಿರಿದರು. ''ಗಣಪತಿ ಹಬ್ಬದ ದಿನ ಯಾವನು Interview ಮಾಡ್ತಾನೆ ಸ್ವಾಮೀ?'' ಎಂದು ಶ್ರೀಮಾನ್ ಅಡ್ಡ ಮಾತಾಡಿದಾಗ, ಅಂಕಲ್ಲು ''ಅಲ್ಲಾ... ನಾಡಿದ್ದು Interview..... ನಾಳೆ ಹಬ್ಬ ಅಲ್ಲೇ ನಮ್ಮಣ್ಣನ ಮನೆಯಲ್ಲೇ ಮಾಡೋಣಾಂತ'' ಎಂದು ನಿಜವನ್ನೇ ಹೇಳಿಬಿಟ್ಟರು. ಆಂಟಿಯ ಕೆಂಗಣ್ಣು ಅವರ ಬೆನ್ನ ಮೇಲಿತ್ತು ಸಧ್ಯ!

ಆಮೇಲೆ ಒಂದು ಥರ ವಿಚಿತ್ರವಾದ ಮೌನ. ಯಾರಿಗೂ ಏನೂ ಹೇಳಲು ತೋಚಲಿಲ್ಲ. ಅಂಕಲ್ ಆಗ ನಿಧಾನವಾಗಿ, ''ನಮ್ಮ ಸಿಲ್ಲಿ ನಿಮ್ಮ ಮಗಳನ್ನು ತುಂಬಾ ಹಚ್ಚಿಕೊಂಡಿದೆ. ನಾಳೆ ನಾಡದ್ದು ಸಿಲ್ಲಿಯನ್ನು ನಿಮ್ಮ ಮನೆಯಲ್ಲಿ ಬಿಟ್ಟು ಹೋಗುತ್ತೇವೆ'' ಎಂದು ಬಾಂಬ್ ಸಿಡಿಸಿದರು. ಶ್ರೀಮತಿ, ಶ್ರೀಮಾನ್ ಇಬ್ಬರೂ ತಬ್ಬಿಬ್ಬು. ಆಗ ಆಂಟಿ ''ಸಿಲ್ಲಿ ಭಾಳ ಒಳ್ಳೇವನು. ಒಂಚೂರು ತಂಟೆ ತಕರಾರಿಲ್ಲ. ಕೇಳಿ ಬೇಕಾದ್ರೆ ನಿಮ್ಮಗಳನ್ನ'' ಎಂದು ಶಿಫಾರಸು ಮಾಡಿದರು. ಮಗಳಾಗಲೇ ಉತ್ಸಾಹದಿಂದ ಕುಣಿಯತೊಡಗಿದಳು. ಮೌನಂ ಸಮ್ಮತಿ ಲಕ್ಷಣಂ ಎಂದು ಆಂಟಿ, ಅಂಕಲ್ ಹೊರಟರು. ಸಿಲ್ಲಿ ಮೊಂಡಾಟ ಮಾಡುತ್ತಾ ಮುದ್ದುಗರೆಸಿಕೊಂಡು ಹೋಯಿತು/ಹೋದ.

ಬೆಳಿಗ್ಗೆ ಎಂಟು ಗಂಟೆಗೆ ಚೈನು, ಬಿಸ್ಕತ್, ಹಾಲು ಇತ್ಯಾದಿ ಪರಿಕರಗಳೊಡನೆ ಸಿಲ್ಲಿ ಹಾಜರಾದ. ಮಗಳು ಅದನ್ನು ಮನೆಯೊಳಗೆ, ಹೊರಗೆಲ್ಲಾ ಸುತ್ತಿಸುವ ಸಂಭ್ರಮದಲ್ಲಿ ರಂಗೋಲಿಯೆಲ್ಲಾ ಕಲಸಿತು. ಶ್ರೀಮತಿ ಮನೆಯ ಮುಂದೆ ರಂಗೋಲಿಯ modren art ಅವತಾರವನ್ನು ಕಂಡು ಸಿಡುಕಿದಾಗ, ಶ್ರೀಮಾನ್ ಮತ್ತು ಮಗಳು ಇಬ್ಬರೂ ಸಿಲ್ಲಿಯ ಪರ

ವಹಿಸಿದರು- ''ಅದಕ್ಕೇನು ತಿಳಿಯುತ್ತೆ, ಪಾಪ!'' ಅಂತ. ಸರಿ ಈಗ ಸಿಲ್ಲಿಗೆ ಗಣಪತಿಯ ಮಂಟಪದ ಮುಂದಿನ ಜಾಗಕ್ಕೆ ಪ್ರವೇಶವಿಲ್ಲ ಎಂದಾಯಿತು. ಶ್ರೀಮತಿ ಪುನಃ ಗುಡಿಸಿ, ಸಾರಿಸಿ, ರಂಗವಲ್ಲಿ ಇಟ್ಟು.....

ಅಷ್ಟು ಹೊತ್ತೂ ಶ್ವಾನ ಸಹಸ್ರನಾಮ ನಡೆಯುತ್ತಿತ್ತು. ಮಗಳ ಹುಬ್ಬು ಗಂಟಿಕ್ಕಿತು. ಶ್ರೀಮಾನರು ಸ್ಥಿತಪ್ರಜ್ಞರಾದರು. ಸಿಲ್ಲಿಗೆ ಶ್ರೀಮತಿಯನ್ನು ಕಂಡರೆ ಗುರ್ ಎನ್ನಬೇಕು ಎಂಬ ಜ್ಞಾನೋದಯವಾಯಿತು.

ಅಂತೂ ಇಂತೂ ಪೂಜೆ ಪ್ರಾರಂಭಿಸಿದಾಗ ಹನ್ನೊಂದು ಗಂಟೆ. ಮಗಳನ್ನು ''ಬಾ'' ಎಂದರೆ, ಅವಳು ''ಸಿಲ್ಲಿ ನನಗೆ ಎದ್ದು ಹೋಗೋಕೇ ಬಿಡುಲ್ಲಾ'' ಎಂದಳು. ಈಗ ಸ್ಥಿತಪ್ರಜ್ಞರು ಎದ್ದು ಬಂದು, ನಾಯಿಯನ್ನು ಗೇಟಿಗೆ ಕಟ್ಟಿ ಮಗಳನ್ನು ಸ್ನಾನಕ್ಕೆ ಬಚ್ಚಲುಮನೆಗೆ ಅಟ್ಟಲೇಬೇಕಾಯಿತು. ಅವಳ ಸ್ನಾನ ಆದಮೇಲೆ ಪೂಜೆ ಪ್ರಾರಂಭ.

''ಶುಕ್ಲಾಂಭರಧರಂ...'' ಮುಂದಿನ ಭಾಗ ಕೇಳಲೇ ಇಲ್ಲ. ಏಕೆ?

''ಬೌ...ಬೌ....ಬೌ....''

''ಯಾಕೋ ಕೂಗ್ತೀ?'' ಎಂದರು ಶ್ರೀಮಾನ್.

''ಹಸಿವಿರಬೇಕು'' ಎಂದಳು ಮಗಳು. ಎದ್ದು ಹೋಗಿ ನಾಯಿ ಬಿಸ್ಕತ್ತನ್ನು ಹಾಕಿ ಬಂದಳು. ಶ್ರೀಮತಿ ''ಕೈ ತೊಳೆದುಕೊಂಡು ಬಾ'' ಎಂದು ಆಜ್ಞಾಪಿಸಿದರು.

''ಆಗ ಮಾರ್ಥಂತು....'' ಎಂದು ಕ್ಯಾಸೆಟ್ ಜೋಯಿಸರು ಆರಂಭಿಸಿದ ಕೂಡಲೇ ''ಬೌ... ಬೌ.... ಬೌ...''


ಶ್ರೀಮಾನ್ ಮತ್ತೆ ಎದ್ದು ಹೋದರು. ನಾಯಿ ಬಿಸ್ಕತ್ ಇದ್ದಲ್ಲೇ ಇದೆ ಬಾಲ ಅಲ್ಲಾಡುತ್ತಿದೆ. ಕಿವಿ ಜೋತು ಬಿದ್ದಿದೆ. ''ಸ್ವಲ್ಪ ಸುಮ್ಮನೆ ಇರೋ'' ಎಂದರು. ಸಿಲ್ಲಿ ಕುಂಯ್‌ಗುಟ್ಟಿದ. (ಕನ್ನಡ ಬರೋಲ್ಲ ಎಂದಿರಬೇಕು) ಶ್ರೀಮಾನ್ ಒಳಗೆ ಬಂದ ಕೂಡಲೇ ಬೌ.... ಬೌ... ಬೌ...

ಈಗ ಮಗಳೆದ್ದು ಹೋದಳು. ಗೇಟ ಬಳಿ ನಿಂತು ಮುದ್ದು ಮಾಡಿದಳು- ನಾಯಿಯನ್ನು ಮುಟ್ಟದೇ... (ಮುಟ್ಟಿದರೆ ಪುನಃ ಸ್ನಾನ ಮಾಡಬೇಕಾಗುತ್ತೆ) ಗುರ್, ಗುರ್... ಆಮೇಲೆ ವಿಲಾಪ... ಆಮೇಲೆ ಬೌ... ಬೌ.... ಬೌ... ಕ್ಯಾಸೆಟ್ ಜೋಯಿಸರ ಸೊಲ್ಲು ಅಡಗಿಹೋಯಿತು.

''ಏನಮ್ಮಾ ಅದು ಗಲಾಟೆ?''

''ಈ ಸಿಲ್ಲಿ ನನ್ನ ಮೇಲೇ ಎಗರ್‍ತಾ ಇದಾನೆ ಅಣ್ಣಾ... (ಆಪತ್ಕಾಲದಲ್ಲಿ 'ಡ್ಯಾಡೀ' ಗಳು ನೆನಪಾಗುಲ್ಲ) ನನಗೆ ಒಳಗೆ ಬರೋಕೆ ಬಿಡ್ತಾ ಇಲ್ಲ''

''ಹೊಸಾ ನಾಯಿ ತಗೊಂಡಿದೀರಾ?'' ಎಂದು ಹಾಜರಾದರು ಪಕ್ಕದ ಬೀದಿಯ ಭಟ್ಟರು. ಉಪಾಯನ ದಾನಕ್ಕಾಗಿ ಅವರಿಗೆ ಬರಹೇಳಿದ್ದುದು. ಅವರನ್ನು ಕಂಡೊಡನೆ



ಸಿಲ್ಲಿ ಆಜನ್ಮ ವೈರಿಯನ್ನು ಕಂಡಂತೆ ಕೂಡಾಡತೊಡಗಿತು. ಚೈನನ್ನು ಉದ್ದಕ್ಕೆ ಎಳೆದುಕೊಂಡು, ಮನೆ ಬಾಗಿಲಿಗೂ, ಗೇಟಿಗೂ, ಲಕ್ಷ್ಮಣರೇಖೆ ಹಾಕಿಬಿಟ್ಟಿತು.

ಐದು ನಿಮಿಷ ಕಿವಿ ಮುಚ್ಚಿಕೊಂಟು ಕಾದ ಅವರು ''ಆಮೇಲೆ ಬರುತ್ತೇನೆ'' ಎಂದು ಕೈಸನ್ನೇ ಮಾಡಿ ತಿಳಿಸಿ ಹೊರಟು ಹೋದರು.

ಕೂಗಿ ಕೂಗಿ ಸುಸ್ತಾಗಿದ್ದ ಸಿಲ್ಲಿ ನೀರು ಕುಡಿಯಲು ಪಕ್ಕಕ್ಕೆ ತಿರುಗಿದಾಗ ಮಗಳು ಮನೆಯೊಳಗೆ ಬರಲು ಸನ್ನಾಹ ಮಾಡಿದ್ದೇ ತಡ, ಸಿಲ್ಲಿ ಹಾರಿ ಅವಳನ್ನು ಹಿಂದಕ್ಕೆ ತಳ್ಳಿ ಬಾಗಿಲಿಗೆ ಅಡ್ಡವಾಗಿ ನಿಂತಿತು. ಸಿಲ್ಲಿಯ ಈ ಬಗೆಯ 'ಪ್ರೀತಿ'ಯನ್ನು ಕಂಡರಿಯದ ಮಗಳು ದಿಗ್ಭ್ರಾಂತಳಾದಳು. ''ಅಣ್ಣಾ'' ಎಂದು ಪ್ರಲಾಪಿಸಿದಳು- ಲಕ್ಷ್ಮಣರೇಖೆಯ ಆಚೆ ನಿಂತು!

ಪಿಳ್ಳಾರಿಯ ಪೂಜೆ ಮುಗಿಸಿ ಶ್ರೀಮಾನ್ ಎದ್ದು ಬಂದರು. ಕಿಟಕಿಯಿಂದ ಮಗಳಿಗೆ ಬ್ರೆಡ್ 'ಪಾಸ್' ಮಾಡಿ, ''ಪೂಸಿ ಹೊಡೆದು ಒಳಗೆ ಬಾ'' ಎಂದು ಹೇಳಿಕೊಟ್ಟರು.

ಸ್ವಲ್ಪ ಹೊತ್ತು ನಿಶ್ಶಬ್ದ. ಪೂಜೆ ಮುಂದುವರೆಯಿತು. ಮಗಳು ಬರಲಿಲ್ಲ. ಶ್ರೀಮತಿಯವರು ಎದ್ದು ಹೋಗಿ ನೋಡಿದರು. ನಾಯಿ ಬಿಸ್ಕತ್ ರಸ್ತೆಗೆ ಹೋಗಿ ಬಿದ್ದಿದೆ. ಬ್ರೆಡ್ ಚೂರು ಚೂರಾಗಿ ಹರಡಿದೆ. ನೀರು ಚೆಲ್ಲಿಹೋಗಿದೆ. ಲಕ್ಷ್ಮಣರೇಖೆ ಮಾತ್ರ ಹಾಗೇ ಇದೆ!

ಪೂಜೆ ನಿಂತಿತು. ''ತಾಳು ಯಾರಾದ್ರು ಡಾಕ್ಟರನ್ನು ಹಿಡಿದು ತಂದು ಇಂಜೆಕ್ಷನ್ ಕೊಟ್ಟು ಮಲಗಿಸುತ್ತೇನೆ'' ಎಂದರು ಶ್ರೀಮಾನ್. ಆದರೆ ಬಾಗಿಲು ತೆಗೆದು ಹೊರಗೆ ಹೋಗುವಂತಿಲ್ಲ. ಮಗಳು ಮನೆಯೊಳಗೂ ಇಲ್ಲ; ಹೊರಗೆ ಹೋಗುವಂತೆಯೂ ಇಲ್ಲ.

ಬೌ... ಬೌ... ಬೌ... ಒಂದೇ ಸಮ ನಡೆದದ್ದು ಕೇಳಿ ಅಕ್ಕಪಕ್ಕದವರೆಲ್ಲಾ ಬಂದರು. ಯಾರ್‍ಯಾರೋ ಏನೇನೋ ಸಲಹೆ ಕೊಟ್ಟರು.... ಯಾರಿಗೂ ಏನೂ ಕೇಳಿಸುವಂತಿರಲಿಲ್ಲ. ತಲೆ ಕೆರೆದುಕೊಂಡು ವಾಪಸಾದರು.

ಶ್ರೀಮತಿಯವರಿಗೆ ತಲೆಬಿಸಿ ಏರಿದ ಹಾಗೆ ಒಂದು ಹೊಸ ಐಡಿಯಾ ಹೊಳೆಯಿತು. Necessity is the mother of invention ಅಲ್ಲವೇ? ಹಿಂದೊಂದು ದಿನ ''ಕಳ್ಳನಿಗೆ ಮನೆಯೊಳಗೆ ಬರಲು ಒಂದು ದಾರಿ ಮಾಡಿಟ್ಟಿದೀರಿ'' ಎಂದು ಶ್ರೀಮಾನ್ ಗುಡುಗಿದ್ದು ನೆನಪಾಯಿತು. ಆ ''ದಾರಿ'' ಹಾಗೇ ಇತ್ತಲ್ಲಾ! ಶ್ರೀಮಾನ್ ಈಗ ಅದನ್ನು ಉಪಯೋಗಿಸಲು ಹೊರಟರು. ತಾರಸಿಯಿಂದ ಚಜ್ಜಾಕ್ಕೆ ಇಳಿದರು. ಅದರ ಕೆಳಗೆ ಇಟ್ಟಿದ್ದ ಮುರುಕಲು ಸ್ಟೂಲಿನ ಮೇಲೆ ನಾಜೂಕಾಗಿ ಹಾರಿದರು. ಅಲ್ಲಿಂದ ಕಾಂಪೌಂಡ್ ಹಾರಿ ರಸ್ತೆ ತಲುಪಿದರು.

ಸ್ಕೂಟರ್ ತೆಗೆಯುವಂತಿಲ್ಲವಲ್ಲ. ಪಾದಯಾತ್ರೆ ಬೆಳೆಸಿ ಡಾಕ್ಟರರ ಮನೆ ಹುಡುಕಿದರು. ಡಾಕ್ಟರ್ ಮನೆಯಲ್ಲಿಲ್ಲ!

ಪುನಃ ವಾಪಸ್. ಕಾಂಪೌಂಡ್ ಹಾರಿ, ಸ್ಟೂಲಿನಿಂದ ಚಜ್ಜಾ, ಅಲ್ಲಿಂದ ತಾರಸಿ, ಅಲ್ಲಿಂದ ಮನೆಯೊಳಗೆ....

ಗೇಟಿನ ಬಳಿ ಬೌ... ಬೌ... ಮುಂದುವರಿದೇ ಇತ್ತು.

ಪೂಜೆ ಈ ಮಂಗಳವಾದ್ಯದೊಡನೆಯೇ ಮುಂದುವರೆಯಿತು. ಮಗಳಿಗೆ ಕಿಟಕಿಯಿಂದ ತೀರ್ಥ, ಪ್ರಸಾದ ರವಾನೆಯಾಯಿತು, ಬಾಲ ಅಲ್ಲಾಡಿಸಿ ಪ್ರಸಾದ ಮೆದ್ದ ಸಿಲ್ಲಿ, ಮಗಳನ್ನು ಮಾತ್ರ ಬಿಟ್ಟುಕೊಡಲಿಲ್ಲ. ಮನೆಗೆ ಬಂದ ಗಣೇಶ ಭಕ್ತರನ್ನು ಓಡಿಸಿತು. ಬಾಗಿನ ತಂದಿದ್ದ ಮುತ್ತೈದೆಯರು ಕಾಂಪೌಂಡ್ ಮೇಲೆ ಬಾಗಿನ ಇಟ್ಟು ಹೋದರು. ಕಿಟಿಕಿಯಿಂದ ಅರಿಶಿನ, ಕುಂಕುಮ ಪಾಸ್ ಆಯಿತು. ಒಬ್ಬೊಬ್ಬರು ಬಂದು ಹೋದಾಗಲೂ ಬೌ.. ಬೌ...ನ ಹೊಸರಾಗ.

ಪೂಜೆ ಮುಗಿದ ಮೇಲೆ ಪುನಃ ಶ್ರೀಮಾನ್ ಕಳ್ಳದಾರಿ ಹಿಡಿದರು. ಆದರೆ ಈ ಬಾರಿಯೂ ಡಾಕ್ಟರ್ ಸಿಗಲಿಲ್ಲ. ಹಸಿದು ಸಪ್ಪಗೆ ಕುಳಿತಿದ್ದ ಮಗಳನ್ನು ಕಾಂಪೌಂಡ್ ಹಾರಿಸಿ ಕಳ್ಳದಾರಿಯಿಂದ ಒಳಗೆ ರವಾನಿಸಿ ಊಟ ಹಾಕಿಸಿದರು.

ಬೌ... ಬೌ... ಬೌ... ನಡೆದೇ ಇತ್ತು. ಒಂದೆರಡು ಸೆಕೆಂಡು ಸಿಲ್ಲಿ ನೀರು ಕುಡಿಯುವಾಗ ನಿಶ್ಶಬ್ದ. ಆಗ ಅಕ್ಕ ಪಕ್ಕದವರು ತಲೆಹಾಕಿ ''ಏನು ಸ್ವಾಮಿ... ಹಬ್ಬದ ದಿನ ತಲೆನೋವು.....?'' ಎಂದ ಕೂಡಲೇ ಪುನಃ ಶುರುವಾಗುತ್ತಿತ್ತು.

ಮೂರನೆಯಬಾರಿ ಶ್ರೀಮಾನ್ ಗೋಡೆ ಹಾರಿದರು. ಆಗ ರಾತ್ರಿ ಎಂಟೂವರೆ. ಸಿಲ್ಲಿಯ ಮನೆಗೇ ಹೋದರು. ಅವರ ಕೆಳಗಿನ ಮನೆಯಲ್ಲಿದ್ದವರನ್ನು ಮಾತನಾಡಿಸಿ, ಎಲ್ಲಿ ಹೋಗಿದ್ದಾರೆ, ಎಂದೆಲ್ಲಾ ವಿಚಾರಿಸುವ ಉದ್ದೇಶ. ಸಾಧ್ಯವಾದರೆ ಟ್ರಂಕ್ ಕಾಲ್ ಮಾಡಿ ಕರೆಸುವುದು ಎಂದು.

ಆ ಗೇಟಿನ ಶಬ್ದವಾದೊಡನೆ ಸಿಲ್ಲಿ ಗಪ್‌ಚಿಪ್ ಆಗಿ, ಕಿವಿ ನಿಮಿರಿಸಿಕೊಂಡು ಎದ್ದು ನಿಂತಿತು. ತೂಕಡಿಸುತ್ತಿದ್ದ ಮಗಳು ಎದ್ದು ನಿಂತಳು. ನಿಶ್ಶಬ್ದವಾಗಿ ಸಿಲ್ಲಿಯ ಬಳಿ ಸರಿದಳು. ಸಿಲ್ಲಿ ಓಡಿಹೋದರೆ ಹೋಗಲಿ ಎಂದು ಮೆಲ್ಲಗೆ ಸರಪಳಿ ಬಿಚ್ಚಿದಳು.

ಶ್ರೀಮಾನ್ ಅವರಿಗೆ ದೊರಕಿದ್ದು ತುಂಟನಗುವಿನ ಉತ್ತರ:

''ಅವರು ಯಾವ ಊರಿಗೂ ಹೋಗಿಲ್ಲ''! ನಖಶಿಖಾಂತ ಉರಿಯುತ್ತಾ ದಾಪುಗಾಲು ಹಾಕುತ್ತಾ ಧಬಾರೆಂದು ಗೇಟು ತೆಗೆದು ಹೊರಗೆ ಬಂದರು....

ಹೀಗೆ ಎರಡನೇ ಬಾರಿಗೆ ಆ ಮನೆಯ ಗೇಟಿನ ಶಬ್ದವಾದಾಗ...

ಅದ್ಭುತ ಚಮತ್ಕಾರ ನಡೆಯಿತು!

ಸಿಲ್ಲಿ ಎರಡೇ ನೆಗೆತಕ್ಕೆ ಆ ಗೇಟು ತಲುಪಿ, ಮೆಟ್ಟಿಲೇರಿ, ತನ್ನ ಗೂಡನ್ನು ಸೇರಿಕೊಂಡಿತು!

ಮಗಳು ಮೆಲ್ಲಗೆ ಹಿಂದೆಯೇ ಹೋಗಿ ಸರಪಳಿ ಬಿಗಿದು ಬಂದಾಗಲೂ ಅದು ವಿಧೇಯನಾಗಿ ನಡೆದುಕೊಂಡಿತು. ಶ್ರೀಮಾನ್, ಶ್ರೀಮತಿ, ಅಲ್ಲದೆ ಎಲ್ಲ ನೆರೆಯವರು ಈ ಅದ್ಭುತ ದೃಶ್ಯವನ್ನು ಬಿಟ್ಟ ಕಣ್ಣು ಬಿಟ್ಟಂತೆ ನೋಡುತ್ತಿದ್ದರು.

ಆಮೇಲೆ ಅದೆಂತಹ ನಿಶ್ಶಬ್ದ!

''ಪುನಃ ಪೂಜೆ'' ನಿರಾತಂಕವಾಗಿ ನಡೆಯಿತು. ಮುತ್ತೈದೆಯರು ಬಂದು ಹೋದರು. ಗಣಪತಿಯ ವಿಸರ್ಜನೆಯೂ ಆಯಿತು.

ದಿನವೆಲ್ಲಾ 'ಬೌ..ಬೌ...'' ಕೇಳಿ ತಲೆನೋವು ಸಂಪಾದಿಸಿದ್ದ ಶ್ರೀಮಾನ್, ಶ್ರೀಮತಿ ಮಾತ್ರೆ ನುಂಗಿ ನಿದ್ದೆ ಹೋದರು.

ಮರುದಿನ ಬೆಳಿಗ್ಗೆ ಯಥಾ ಪ್ರಕಾರ ಸಿಲ್ಲಿ ವಾಕಿಂಗ್ ಬಂದ. ಕಿಟಕಿಯ ಬಳಿ ನಿಂತು 'ಬೌ' ಎಂದ. ಬೆಚ್ಚಿ ಬಿದ್ದು ಎದ್ದರು ಮಗಳು, ತಂದೆ, ತಾಯಿ.

ಮಗಳು ಕಿಟಕಿಯಲ್ಲಿ ತಲೆಹಾಕಿ 'ಹಾಯ್' ಎಂದಳು. ಸಿಲ್ಲಿ ಬಾಲ ಅಲ್ಲಾಡಿಸಿ ಸ್ವೀಕರಿಸಿದ.

ಚೈನ್ ಹಿಡಿದಿದ್ದ ಅಂಕಲ್ 'ಗುಡ್ ಮಾರ್ನಿಂಗ್' ಎಂದು ಹಲ್ಲು ಕಿರಿದು ಮುಂದೆ ಸಾಗಿದರು- ಹಿಂದಿನ ದಿನದ ಪುರಾಣ ಹೇಳುತ್ತಾ/ಕೇಳುತ್ತಾ ಸಮಯ ಹಾಳು ಮಾಡಿದರೆ... ನೆರೆಹೊರೆಯವರಿಗೆ ತೊಂದರೆ ಕೊಟ್ಟಂತೆ - ಅಲ್ಲವೇ?

ನಿಮಗೂ ಸನ್ಮಾನ ಬೇಕೆ?

ಸುಜಾತ ರಾಜಣ್ಣ

ಇತ್ತೀಚಿಗೆ ಸನ್ಮಾನ ಮಾಡಿಸಿಕೊಳ್ಳುವ ಹುಚ್ಚು ಜನರಲ್ಲಿ ಹೆಚ್ಚು ಹೆಚ್ಚು ಬೆಳೀತಾ ಇದೆ. ತಾವು ಏನೇ ಮಾಡಿದರೂ ಎಲ್ಲರೂ ಗುರುತಿಸಬೇಕು ಅದಕ್ಕೆ ಏನು ಬೇಕಾದರೂ ಮಾಡೋಕೆ ಎಲ್ಲರೂ ಸಿದ್ಧರಾಗಿರ್ತಾರೆ. ಅಂತಹವರಿಗಾಗೇ ಬೇಕಾದಷ್ಟು ಸನ್ಮಾನ ಮಾಡೋ ಸಂಸ್ಥೆಗಳೂ ಬೆಳೀತಾನೇ ಇದೆ.

ನಾವು ಮಾಡಿದ ಯಾವುದೇ ಸೇವೇನ ಸರ್ಕಾರ ಗುರುತಿಸಿ ಸನ್ಮಾನ ಮಾಡೋ ಹೊತ್ತಿಗೆ ಸೇವೆ ಮಾಡಿದವರು ಗೊಟಕ್ ಅಂದಿರ್ತಾರೆ. ಹಾಗಾಗಿ ಅವರ ಪ್ರೇತಕ್ಕೆ ಅಂದರೆ ಸತ್ತನಂತರ ಸನ್ಮಾನ ಮಾಡಬೇಕು. ಸರ್ಕಾರದ ಈ ನಿಧಾನ ಬುದ್ದಿಯನ್ನು ಗುರುತಿಸಿ ಎಷ್ಟೋ ಸಂಘ ಸಂಸ್ಥೆಗಳು ಸೇವೆ ಮಾಡಿದವರನ್ನೂ, ಬುದ್ದಿವಂತರನ್ನು, ತಲೆ ಇರುವವರನ್ನು, ತಲೆ ಇಲ್ಲದೆ ಇರುವವರನ್ನು, ಸನ್ಮಾನ ಮಾಡಿಸಿಕೊಳ್ಳುವ ಹುಚ್ಚಿನವರನ್ನು ಗುರುತಿಸಿ, ಪತ್ತೆಹಚ್ಚಿ ಪಟ್ಟಾಗಿ ಕೂತು ಸನ್ಮಾನ ಮಾಡೋ ಕಾರ್ಯವನ್ನು ಹಮ್ಮಿಕೊಂಡಿವೆ.

ಹೀಗೆ ಒಂದು ಸಲ ನಮ್ಮ ಸ್ನೇಹಿತರಿಗೆ ಒಂದು ಕಾಗದ ಬಂತು. ಅವರು ಯಾವುದೋ ದೊಡ್ಡ ವಿದೇಶಿ ಕಂಪನಿಯಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದರು. ಒಳ್ಳೆ ಕೆಲಸಗಾರರು ಹಾಗೂ ಬುದ್ದಿವಂತರು. ಕಾಗದ ನೋಡಿ ತುಂಬಾ ಸಂತೋಷ ಆಯಿತು. ಕಾಗದದ ಸಂಕ್ಷಿಪ್ತ ವಿವರ ಹೀಗಿತ್ತು. ನಿಮ್ಮ ದಕ್ಷತೆಯನ್ನು ಗುರುತಿಸಿ ನಿಮಗೆ ಸನ್ಮಾನ ಮಾಡಬೇಕು ಅಂತ ತೀರ್ಮಾನಿಸಿದ್ದೇವೆ. ನಮ್ಮ ಸಂಸ್ಥೆ ಇಂತಹ ಜನ ಸೇವಾ ಕಾರ್ಯವನ್ನು ಸುಮಾರು ಮೂರು ವರ್ಷದಿಂದ ಮಾಡುತ್ತಾ ಬಂದಿದೆ. ನಮ್ಮ ಸಂಸ್ಥೆಯಿಂದ ಗೌರವಿಸಲ್ಪಟ್ಟವರು ಎಂದು ತುಂಬಾ ದೊಡ್ಡ ಪಟ್ಟಿಯನ್ನು ಪ್ರಕಟಿಸಿ ಭಾರತದ ಕೇಂದ್ರ ಮಂತ್ರಿಗಳು, ಅಧ್ಯಕ್ಷರು ಮುಂತಾದವರ ಹೆಸರುಗಳನ್ನು ಅದರಲ್ಲಿ ಪ್ರಕಟಿಸಿದ್ದರು. ನಮ್ಮ ಸ್ನೇಹಿತರಿಗೆ ಖುಷಿಯೋ ಖುಷಿ. ತಮ್ಮ ಹೆಸರು ಅಂತಹ ದೊಡ್ಡ ಮನುಷ್ಯರ ಜೊತೆ ಮುಂದಿನ ವರ್ಷದ ಪಟ್ಟಿಯಲ್ಲಿ ಸೇರಿ ಹೋಗುತ್ತೆ ಅಂತ ಹೆಮ್ಮೆಯಿಂದ ಬೀಗಿದರು. ತಕ್ಷಣ ಸುಂದರವಾದ ಕಾಗದ ತೆಗೆದುಕೊಂಡು ಮುದ್ದಾದ ಅಕ್ಷರದಲ್ಲಿ, ಒಳ್ಳೆಯ ಇಂಗ್ಲೀಷ್ ಪದ ಜೋಡಣೆ ಮಾಡಿ ಕಾಗದ ಬರೆದು ಹಾಕಿದರು. ಖಂಡಿತ ಡೆಲ್ಲಿಗೆ ಸನ್ಮಾನ ಸಮಾರಂಭಕ್ಕೆ ಬರುವುದಾಗಿ ಭರವಸೆ ಕೊಟ್ಟು ಅನಂತ ವಂದನೆಗಳನ್ನು ಸಲ್ಲಿಸಿದರು. ಇದಾದ ಒಂದು ವಾರ ಬರೀ ಇದೇ ವಿಷಯ ಮಾತಾಡಿ ನಮ್ಮ ತಲೆ ತಿಂದರು.

ಒಂದು ವಾರದ ಮೇಲೆ, ಡೆಲ್ಲಿಯಿಂದ ಕಾಗದ ಬಂತು. ಆ ಸನ್ಮಾನ ಸಂಸ್ಥೆಯವರು ಇವರು ಸನ್ಮಾನ ಮಾಡಿಸಿಕೊಳ್ಳಲು ಒಪ್ಪಿದ್ದಕ್ಕೆ ತಮ್ಮ ಸಂತೋಷ ವ್ಯಕ್ತ ಪಡಿಸಿ ಒಂದು ತಿಂಗಳ ನಂತರ ಕಾರ್ಯಕ್ರಮಕ್ಕೆ ದಯಮಾಡಿಸಬೇಕೆಂದು ದಿನಾಂಕ ತಿಳಿಸಿ ಕೊನೆಯಲ್ಲಿ

ಸಣ್ಣದಾಗಿ ಒಂದು ವಿ.ಸೂ ಬರೆದಿದ್ದರು. ಅದನ್ನು ನೋಡಿದಾಗ ನಮ್ಮ ಸ್ನೇಹಿತರು ಮೂರ್ಛೆ ಬೀಳದೇ ಇದ್ದದ್ದೇ ಒಂದು ವಿಶೇಷ. ಅಲ್ಲಿ ಹೀಗೆ ಬರೆದಿದ್ದರು ''ತಾವು ದಯಮಾಡಿ ಈ ಸಂಸ್ಥೆಗೆ ರೂ 10,000/- ಕಳುಹಿಸಿ ಕೊಡಿ ತಮ್ಮಂತಹವರ ಪ್ರೋಷಣೆ ಇಂದಲೇ ಈ ಸಂಸ್ಥೆ ಬೆಳೆಯುತ್ತಿದೆ ನಿಮ್ಮ ಡೆಲ್ಲಿ ಪ್ರವಾಸದ ಖರ್ಚು, ವೆಚ್ಚಗಳಿಗೆ ನೀವೆ ಹೊಣೆ ಹಾಗೂ ಫೋಟೋ ಮತ್ತು ವೀಡಿಯೋ ಖರ್ಚಿಗಾಗಿ ರೂ 3,500/- ಸಹ ಇದರ ಜೊತೆಗೆ ಸೇರಿಸಿ ಒಟ್ಟು ರೂ 13,500/- ಕ್ಕೆ ಡಿಮಾಂಡ್ ಡ್ರಾಫ್ಟ್ ಕಳುಹಿಸಿ ನಿಮ್ಮ ಆಗಮನವನ್ನು ನಿರೀಕ್ಷಿಸುತ್ತಿರುತ್ತೇವೆ.''

ನಮ್ಮ ಸ್ನೇಹಿತರಿಗೆ ಸಿಟ್ಟು ಬಂತು. ತಕ್ಷಣ ಇನ್ನೊಂದು ಕಾಗದ ಬರೆದರು. ನಾನು ನಿವೃತ್ತಿ ಹೊಂದಿದವ ನನ್ನಿಂದ ಅಷ್ಟೊಂದು ಹಣ ಕಳುಹಿಸಲು ಸಾಧ್ಯವಿಲ್ಲ. ಬೇಕಾದರೆ ಡೆಲ್ಲಿ ಪ್ರವಾಸದ ಖರ್ಚು ಮಾತ್ರ ಭರಿಸಬಲ್ಲೆ.

ನಂಬಿದರೆ ನಂಬಿ ಬಿಟ್ಟರೆ ಬಿಡಿ ಅಲ್ಲಿಂದ ಮತ್ತೆ ಕಾಗದ ಬರಲೇ ಇಲ್ಲ. ನಮ್ಮ ಸ್ನೇಹಿತರಿಗೆ ಪೀಕಲಾಟ ಶುರುವಾಯಿತು. ಎಲ್ಲರಿಗೂ ಹೇಳಿ ಆಗಿದೆ 'ವಿಜಯಶ್ರೀ' ಸನ್ಮಾನ ಸಿಕ್ಕಿದೆ ಅಂತ. ಕೆಲವು ಪತ್ರಿಕೆಗಳಲ್ಲಿ ಭಾವಚಿತ್ರ ಸಹಿತ ವಿಷಯ ಪ್ರಕಟಣೆ ಆಗಿದೆ. ಈಗ ಏನು ಮಾಡೋದು ಅಂತ ಅವರಿಗೆ ತೋಚಲೇ ಇಲ್ಲ. ಅವರ ತೊಳಲಾಟ ನೋಡಲಾರದೆ ಅವರ ಮಕ್ಕಳು ರೂ 10,000/- ವನ್ನು ಆ ಸನ್ಮಾನ ಸಂಸ್ಥೆಗೆ ಕಳುಹಿಸಿ ಕೊಟ್ಟರು ಮತ್ತೆ ತಂದೆ ತಾಯಿ ಇಬ್ಬರನ್ನೂ ಡೆಲ್ಲಿಗೆ ಕಳುಹಿಸಿದರು. ಸನ್ಮಾನ ಸಮಿತಿಯವರು ಅಲ್ಲಿ ಯಾವುದೋ ಸಣ್ಣ ಹೋಟೆಲಿನಲ್ಲಿ ಇವರಿಗೆ ಟೀ ಕೊಟ್ಟು, ಆ ಸನ್ಮಾನ ಸಮಿತಿಯ ಅಧ್ಯಕ್ಷರಿಂದ ಇವರಿಗೆ ಮಾಲಾರ್ಪಣೆ ಮಾಡಿಸಿ ಒಂದು ಸನ್ಮಾನ ಪತ್ರ ಕೊಟ್ಟು ಇವರ ಹಾಗೆ ಬಂದಿದ್ದ ಕೆಲವು ಬಕರಗಳನ್ನು ಸನ್ಮಾನಿಸಿ ಇವರ ದುಡ್ಡಿನಲ್ಲೇ ಕೇವಲ ರೂ 300/- ಖರ್ಚು ಮಾಡಿ ಮಿಕ್ಕಿದ್ದನ್ನು ಸನ್ಮಾನ ಸಮಿತಿಯವರು ಜೇಬಿಗಿಳಿಸಿ ಸಂಭ್ರಮದಿಂದ ಇವರನ್ನು ಕಳುಹಿಸಿಕೊಟ್ಟರು. ಆ ಸನ್ಮಾನ ಕಾರ್ಯಕ್ರಮ ನೋಡಿ ನಮ್ಮ ಸ್ನೇಹಿತರು ಸುಸ್ತು ಹೊಡೆದರು. ತನ್ನ ಹಣ ಹೀಗೆ ಅನ್ಯಾಯವಾಗಿ ಅವರಿವರ ಜೇಬಿಗೆ ಇಳಿದಾಗ ಈ ಹಗಲು ದರೋಡೆ ನೋಡಿ ದಂಗಾದರು. ಹಣ ಮಾಡುವ ಇನ್ನೊಂದು ಸುಲಭ ವಿಧಾನ ತುಂಬಾ ಖರ್ಚು ಮಾಡಿ ತಿಳಿದು ಕೊಂಡರು. ಈಗ ಪ್ರತಿದಿನಾ ಗೋಳಾಡ್ತಾರೆ. ಎಲ್ಲರೂ ಎಷ್ಟು ಸುಲಭವಾಗಿ ದುಡ್ಡು ಮಾಡ್ತಾರೆ ನಾವು ಏಕೆ ಹೀಗೆ ಬೆಳಿಗ್ಗೆಯಿಂದ ಸಂಜೆವರೆಗೆ ದುಡಿದು ಹಣ್ಣಾಗ್ತೀವಿ. ಈಗ ಇದೇ ಅವರಿಗೆ ಯಕ್ಷ ಪ್ರಶ್ನೆ ಆಗಿ ಬಿಟ್ಟಿದೆ.

ಸನ್ಮಾನ ಸಮಾರಂಭಕ್ಕೆ ಇವರ ಹಾಗೆ ಭಾರತದ ಎಲ್ಲಾ ಕಡೆಯಿಂದ ಬೇಕಾದಷ್ಟು ಜನ ತಲೆ ಇಲ್ಲದವರು ಅವರು ಕೇಳಿದಷ್ಟು ದುಡ್ಡು ಕೊಟ್ಟು ಬಂದಿದ್ದರು. ಸುಮಾರು 3 ಲಕ್ಷ ರೂಪಾಯಿ ಸುಲಭವಾಗಿ ಸನ್ಮಾನ ಸಮಿತಿಯವರು ಮಾಡಿಕೊಂಡರು.

ನಮ್ಮ ಸ್ನೇಹಿತರು ಪಾಪ ಒಳ್ಳೆಯವರು. ಆದ್ದರಿಂದ ನಿಜ ಹೇಳಿದರು ಹಾಗಾಗಿ ನಮಗೆ ಈ ವಿಚಾರ ಗೊತ್ತಾಯಿತು. ಎಷ್ಟೊಂದು ಸಲ ಈ ತರಹದ ಸನ್ಮಾನ ಮಾಡಿಸಿಕೊಂಡವರು

ತಮ್ಮ ಭಾವಚಿತ್ರ ದಿನ ಪತ್ರಿಕೆಗಳಲ್ಲಿ ಹಾಕಿಸಿಕೊಂಡಿರ್ತಾರೆ. ಅದನ್ನು ನೋಡಿ ನಮಗೆ ಗುರುತಿನವರಾದರೆ ಅವರನ್ನು ಅಭಿನಂದಿಸ್ತೀವಿ. ಆದರೆ ಆ ಸನ್ಮಾನದ ಹಿಂದಿನ ಕಥೆ ನಿಮಗೆ ಗೊತ್ತಿತ್ತೇ? ಈಗ ಗೊತ್ತಾಗಿದೆ ಅಲ್ಲವಾ? ಇನ್ನು ಮೇಲೆ ಯಾರಿಗಾದರೂ ಸನ್ಮಾನ ಸಿಕ್ಕಿದರೆ ಅವರನ್ನು ಕೇಳಿ, ಅದಕ್ಕೆ ನೀವು ಎಷ್ಟು ದುಡ್ಡು ಖರ್ಚು ಮಾಡಿದಿರಿ ಅಂತ. ಅವರು ಖಂಡಿತ ನಿಜ ಹೇಳಲ್ಲ. ಯಾಕೆಂದರೆ ಅವರು ಮೂರ್ಖರು ಅಂತ ಪ್ರಚಾರ ಮಾಡಿಕೊಳ್ಳೋಕೆ ಅವರು ಇಷ್ಟಪಡಲ್ಲ ಹಾಗಾಗಿ ಇಂತಹ ಸನ್ಮಾನ ಸಂಸ್ಥೆಗಳು ಹೆಮ್ಮೆಯಿಂದ ತಲೆ ಎತ್ತಿ ದುಡ್ಡು ಮಾಡಿಕೊಳ್ತಾ ಇವೆ.

ನಿಮಗೂ ಸನ್ಮಾನ ಮಾಡಿಸಿಕೊಳ್ಳೋಕೆ ಇಷ್ಟಾನಾ? ಹಾಗಾದ್ರೆ ನನ್ನ ಹತ್ತಿರ ವಿಳಾಸ ಇದೆ. ನನಗೆ ಅದಕ್ಕೆ ಕೇವಲ ರೂ. 2000/- ಕೊಟ್ಟರೆ ಸಾಕು ನಾನೇ ನಿಮ್ಮ ಹೆಸರನ್ನು ಶಿಫಾರಸ್ಸು ಮಾಡಿ ನಿಮ್ಮ ಇಲ್ಲದ ದಕ್ಷತೆಯನ್ನು ಗುರುತಿಸಿ ಕನ್ನಡದಲ್ಲಿ, ಇಂಗ್ಲೀಷಿನಲ್ಲಿ ಹಾಗೂ ಹಿಂದಿಯಲ್ಲಿ ಒಳ್ಳೆಯ ಪದ ಹಾಗೂ ವಾಕ್ಯಗಳನ್ನು ಜೋಡಿಸಿ ಮುದ್ದಾದ ಅಕ್ಷರದಲ್ಲಿ, ಒಳ್ಳೆಯ ಕಾಗದದಲ್ಲಿ ಬರೆದು ದೆಹಲಿಗೆ ಅಂಚೆ ಮೂಲಕ ಕಳುಹಿಸುತ್ತೇನೆ. ಅವರಿಂದ ನಿಮಗೆ ಕಾಗದ ಬಂದ ಮೇಲೆ ನನಗೆ ರೂ. 2000/- ಕೊಟ್ಟರೆ ಸಾಕು.

ನಿಮಗೆ ಯಾವ ಸನ್ಮಾನ ಬೇಕು. ವಿಜಯಶ್ರೀ ಅಥವಾ ಯಾವುದೇ ಶ್ರೀ ಬೇಕಾದರೂ ಸರಿ ನಾನು ಕೊಡಿಸುತ್ತೇನೆ. ಈ ಗೌರವ ನಿಮಗೆ ಬೇಕೆ? ಕೂಡಲೇ ಭೇಟಿ ಮಾಡಿ.



ಇಂಡೋ-ಪಾಕ್ ಜಂಟಿ ಮಾತು ಕತೇಲಿ, ಶಾಂತಿಯುತವಾಗಿ ಕ್ರಿಕೆಟ್ ಆಡೋದರ ಬಗ್ಗೆ ಸಹಾ ಒಪ್ಪಂದ ಆಗ್ಬೇಕಲ್ವೇ!

ಅಕಾಡೆಮಿ ಉಪಾಖ್ಯಾನ-2

"ಭೂಪಿ"

ಯುದ್ಧ ಮಾಡುವ ಕಲೆಯನ್ನು ಮುಖ್ಯವಾಗಿ Camp ಗಳ ಮೂಲಕ ಕಲಿಸಿಕೊಡುತ್ತಿದ್ದರು. ಅಕಾಡಮಿಯ ಸುತ್ತಮುತ್ತ ಬಂದೂಕು ಚಲಾವಣೆ, ಯುದ್ಧ ಭೂಮಿಯಲ್ಲಿ ಚಲಿಸುವ ವಿಧಾನ ಇತ್ಯಾದಿ preliminary ತರಬೇತಿ ನಡೆಯುತ್ತಿತ್ತು. ಇದು ನಡೆಯುತ್ತಿದ್ದುದು ಟಾನ್ಸ್ (Tons) ನದಿ ಪಾತ್ರದಲ್ಲಿ. ಡೆಹ್ರಾಡೂನ್ ಸುತ್ತಲು ಶಿವಾಲಿಕ್ ಪರ್ವತಶ್ರೇಣಿ. ಇದರ ಮಧ್ಯದಲ್ಲಿ ಟಾನ್ಸ್ ನದಿಯ ವಿಶಾಲವಾದ ಪಾತ್ರ. ಮುಖ್ಯವಾಗಿ ಬೇಸಿಗೆಯಲ್ಲಿ (ಹಿಮಾಲಯದ ಮೇಲಿನ ಹಿಮ ಕರಗಲು ಶುರು ಆದಾಗ) ಮತ್ತು ಮಳೆಗಾಲದಲ್ಲಿ ಈ ನದಿ ಭೋರ್ಗರೆಯುತ್ತಾ ಲಕ್ಷಾಂತರ ಕಲ್ಲುಗಳ ಮಧ್ಯೆ ಹರಿಯುತ್ತದೆ. ಬಾಕಿ ಕಾಲದಲ್ಲಿ ಪಾತ್ರವೆಲ್ಲಾ ಕಲ್ಲಾಗಿ ಮಧ್ಯದಲ್ಲಿ ಮಟ್ಟಿಗೆ ನೀರು ಹರಿಯುತ್ತಿರುತ್ತದೆ... ಒಂದು ಸಣ್ಣ ಝರಿಯ ತರ. ಈ ನಮ್ಮ ತರಬೇತಿಯ Setting ನೆನಸಿಕೊಂಡರೆ ಈಗಲೂ ಮೈ ಜುಂ ಎನ್ನುತ್ತದೆ. ಆ ನದಿಯಲ್ಲಿನ ಕಲ್ಲುಗಳ ಮೇಲೆ ಜಾರುತ್ತಾ, ತೆರಳುತ್ತಾ, ಕುಂಟುತ್ತಾ, ನಡೆಯುತ್ತಾ ಇರುವಾಗ ಆಗುವ ತರಚು, ಪರಚು ಘಾಯಗಳು ಎಷ್ಟೋ..... ಆದರು Tons ನದಿ ಎಂದರೆ ನಮಗೆ ಒಂದು ತರಹ love/ hate relationship. ಎಷ್ಟು ಬಾಧೆ ಕೊಟ್ಟಿದ್ದರೂ Tons ನದಿ ನಮ್ಮನ್ನು real soldiers ಆಗಿ ಮಾಡಿದ ಪುಣ್ಯತೀರ್ಥ!

ಯುದ್ಧ ಮಾಡುವ ವಿಧಾನಕ್ಕೆ tactics ಎಂದು ಹೆಸರು. ನಾವು ಇದ್ದ ಹನ್ನೊಂದು ತಿಂಗಳಲ್ಲಿ ಈ ವಿಧಾನಗಳನ್ನು ಅಳವಡಿಸಿಕೊಳ್ಳಲು ಮೂರು camp ಗಳಿಗೆ ಹೋಗಬೇಕಾಗಿತ್ತು. ಮೂರು ದಿನಗಳ ಮೊದಲನೆಯ camp, camp initial ಅಂತ. ಆಮೇಲೆ ಒಂದೊಂದು ವಾರದ ಎರಡು campಗಳು ಕಡೆಯ campನಲ್ಲಿ skirmishing in groups, laying ambushes, practice attack and defence of company localities. ಎನ್ನುವ ಅಭ್ಯಾಸಗಳನ್ನು ನಡೆಸುತ್ತಿದ್ದೆವು. ಇದೇ ನಮ್ಮ ಟ್ರೈನಿಂಗ್‌ನ ಅಗ್ರ ಶಿಖರ. ಇದಾದ ನಂತರ ಒಂದು ವಾರದ ಮೇಲೆ ಅಕಾಡಮಿಗೆ ವಿದಾಯ...... ಆಫೀಸರ್‌ಗಳಾಗಿ. ಇದು ಸಧ್ಯಕ್ಕೆ ಇಷ್ಟೇ ಇರಲಿ.

ಎರಡನೆಯ camp ವಿಶೇಷವೇನೆಂದರೆ ಸ್ವಾವಲಂಬನೆ, ಆತ್ಮವಿಶ್ವಾಸ ಮತ್ತು ಸಮಯಸ್ಫೂರ್ತಿ... ಈ ಗುಣಗಳನ್ನು ವೃದ್ಧಿಪಡಿಸುವ ಪ್ರಯತ್ನ. ಇದರ ಅಂಗವಾಗಿ ಮೂರು ರಾತ್ರಿ ಪೂರ್ತಿ ಅಂದರೆ ರಾತ್ರಿ 8-9 ಘಂಟೆಯಿಂದ ಸೂರ್ಯೋದಯದ ತನಕ ಕಾಡಿನಲ್ಲಿ ಕಾಲ್ನಡಿಗೆಯಲ್ಲಿ ಸಣ್ಣ ತುಕಡಿಗಳಾಗಿ Compass ಸಹಾಯದಿಂದ ದಿಕ್ಕು ಹಿಡಿದು ಹೋಗಬೇಕಾಗಿತ್ತು ನಡಿಗೆ ಓಡಾಟ ಎಲ್ಲಾ ಕಾಡಿನೊಳಗೆ... ಕಾಲ್ದಾರಿ ಸಹ ಹಿಡಿಯಬೇಕೆಂದಿಲ್ಲ.... ಮುಂದೆ ಒಬ್ಬ compass ಹಿಡಿದು, ಅದರ ಸೂಜಿಯ ಮೇಲೆ ಗಮನವಿಟ್ಟು ಮುಂದೆ ಮುಂದೆ ಹೋಗುತ್ತಿದ್ದರೆ.... ಆತನ ಹಿಂದೆ ಬಾಲ ಎಂಬಂತೆ 5-6

ಜನ ಹೋಗುತ್ತಿದ್ದೆವು. ಒಂದು ರಾತ್ರಿ ಹೀಗೆ ಪ್ರಯಾಣ ಬೆಳೆಸಿದ್ದಾಗ ನಮ್ಮ 'ಭಟ್ಟು' Compass bearer ಆಗಿದ್ದ. ಆಗ ಇದ್ದಕ್ಕಿದ್ದಂತೆ ಗಾಢಾಂಧಕಾರದಲ್ಲಿ ಮುಂದುಗಡೆಯಿಂದ ಒಂದು ವಿಲಕ್ಷಣವಾದ ಕೂಗು ಕೇಳಿ ಬಂತು.... ಆಮೇಲೆ ಎಲ್ಲವೂ ನೀರವ, ಯಾರಿಗೂ ಏನಾಯಿತೆಂದು ತಿಳಿಯದು. ನೀರವತೆ ಆವರಿಸಿದ ಮೇಲೆ ಭಯ ಕಾಡಲು ಶುರು ಮಾಡಿತು. ಮುಂದೆ ಯಾವ ಕಾಡುಪ್ರಾಣಿ ಅಡ್ಡ ಬಂದಿದೆಯೋ, ಯಾರನ್ನು ಹಾರಿಸಿಕೊಂಡು ಹೋಗಿದೆಯೋ ಅಂತ... ಶಿವಾಲಿಕ್ ತಪ್ಪಲಿನ ಕಾಡು ಆಗ ಹುಲಿಗಳ ಬೀಡಾಗಿತ್ತು. ಹೀಗಾಗಿ ಗಾಬರಿ ಜಾಸ್ತಿಯೇ ಆಯಿತು. "Head Count' ತೆಗೆದುಕೊಂಡಾಗ ಭಟ್ಟೂ ಪತ್ತೇನೇ ಇಲ್ಲ! ಎದೆ ಹೊಡೆದುಕೊಳ್ಳತೊಡಗಿತು. ಮೆತ್ತಗೆ 'ಭಟ್ಟೂ, ಭಟ್ಟೂ' ಅಂತ ಕೂಗಿದವು. (ಅಭ್ಯಾಸದ ನಿಯಮದ ಪ್ರಕಾರ, ಕಾಡಿನಲ್ಲಿ ಆದಷ್ಟು ನಿಶ್ಯಬ್ಧವಾಗಿ ನಡೆಯಬೇಕಾಗಿತ್ತು) ಯಾವ ಉತ್ತರವೂ ಇಲ್ಲ.... ಗುಂಪಿಗೆ ಒಂದು Torch... emergency ಗೆ ಅಂತ issue ಆಗಿತ್ತು. ಮೆಲ್ಲಗೆ ಅದರ ಸಹಾಯದಿಂದ ಅಲ್ಲಿ, ಇಲ್ಲಿ ಹತ್ತಿರ ಬೆಳಕು ಹಾಯಿಸಿದೆವು. ಯಾವ ಸುಳಿವೂ ಸಿಗಲಿಲ್ಲ. ಘಾಬರಿ ಜಾಸ್ತಿಯಾಗಿ 'ಭಟ್ಟೂ' ಪಠಣ ಜಾಸ್ತಿ ಮಾಡಿದೆವು. ಜೋರಾಗಿ ಸಹ ಕೂಗಿದೆವು. ಎಲ್ಲಿಂದಲೋ 'ಹೇ' ಅಂತ ಒಂದು ಅಶರೀರವಾಣಿ ಕೇಳಿಸಿತು. ಹುಡುಕಾಟ ಜೋರಾಯಿತು... ಮುಂದೆ ಒಂದು ಕೊರಕಲು. ಮೇಲೆ ಹುಲ್ಲು, ಕಡ್ಡಿ, ಬಳ್ಳಿಗಳಿಂದ ಕೊರಕಲು ಮುಚ್ಚಿಕೊಂಡಿತ್ತು. ಮತ್ತೊಂದು ಸಲ ಅಶರೀರವಾಣಿ ಕೇಳಿಸಿದಾಗ... ಎಲ್ಲಿಂದ ಅಂತ ಗೊತ್ತಾಯಿತು. ಬೇಗ ಬೇಗ ಹುಲ್ಲು, ಕಡ್ಡಿ, ಬಳ್ಳಿಗಳನ್ನು ಸರಿಸಿದೆವು ಕೆಳಗೆ ಒಂದು ಪ್ರಪಾತದಂತೆ ಕಂಡ ಕತ್ತಲೆಯಲ್ಲಿ ಕೆಂಪಗೆ ಏನೋ ಕಾಣಿಸಿತು. Torch ಬೆಳಕನ್ನು ಕೊರಕಲಲ್ಲಿ ಬಿಟ್ಟೆವು ಭಟ್ಟು! ತಲೆಕೆಳಗಾಗಿದ್ದಾನೆ. ಕಾಲುಗಳು ಬಳ್ಳಿಗಳ ಮಧ್ಯೆ ಸಿಕ್ಕಿಕೊಂಡಿ ಕೈನಲ್ಲಿ . Compass ಇನ್ನೂ ಹಾಗೇ ಇದೆ. ಬಾಯಿನಲ್ಲಿ ಕೆಂಪಗೆ ಉರಿಯುತ್ತಿರುವ ಸಿಗರೇಟು ಪ್ರಯಾಸಪಟ್ಟು ಎತ್ತಿದೆವು. ಸಧ್ಯ ಏನೂ ಆಗಿರಲಿಲ್ಲ. ಸ್ವಲ್ಪವೂ ಘಾಬರಿ ಆಗಲಿ, ಆತಂಕವಾಗಲಿ ಆತನ ಮುಖದ ಮೇಲೆ ಇದ್ದ ಹಾಗೆ ಕಾಣಲಿಲ್ಲ. ನಿರ್ಲಿಪ್ತನಾಗಿ ಕಾಣುತ್ತಿದ್ದ (ಈ ಅಭ್ಯಾಸದ ಉದ್ದೇಶ ಸಾರ್ಥಕವಾದ ಹಾಗೆ) ನಮ್ಮ ಭಟ್ಟೂ ಸಲ್ಪ ಹಾಗೇನೇ ಅನ್ನಿ. ನಿರ್ಲಿಪ್ತತೆ ಆತನ ಸ್ವಭಾವ. 65ನೇ ಇಸವಿ ಯುದ್ಧದಲ್ಲಿ ಸಹ ಇದೇ ನಿರ್ಲಿಪ್ತತೆಯನ್ನು ತೋರಿಸಿದ್ದ ನಮ್ಮ ಭಟ್ಟು. ಪಂಜಾಬಿನಲ್ಲಿ ಜೀಪಿನಲ್ಲಿ ಹೋಗುತ್ತಿದ್ದಾಗ ಪಾಕಿಸ್ತಾನದ ಎರಡು ವಿಮಾನಗಳು ಅದೇ ರಸ್ತೆಯಲ್ಲಿ ಚಲಿಸುತ್ತಿದ್ದ ನಮ್ಮ ಇತರ ವಾಹನಗಳ ಮೇಲೆ ಧಾಳಿ ಮಾಡಲು dive ಮಾಡಿದವು. ಭಟ್ಟು ಜೀಪ್ ಡ್ರೈವರ್‌ಗೆ ರಸ್ತೆ ಬಿಟ್ಟು ಪಕ್ಕದ ಬಯಲು ಪ್ರದೇಶಕ್ಕೆ ಜೀಪ್ ತಿರುಗಿಸಲು ಹೇಳಿದ. ಜೀಪ್ ನಿಲ್ಲಿಸಿ ಡ್ರೈವರ್‌ಗೆ 'ಓಡು' ಎಂದು ಹೇಳಿ ತಾನೂ ಜೀಪ್‌ನಿಂದ ದೂರ ಓಡಿ ನೆಲದ ಮೇಲೆ ಬೋರಲಾಗಿ ಬಿದ್ದುಕೊಂಡ. ಎರಡು ಕಿವಿಗಳನ್ನೂ ಕೈನಿಂದ ಮುಚ್ಚಿಕೊಂಡು. ಎರಡು ಸಲ ಧಾಳಿ ನಡೆಸಿದ ಮೇಲೆ ವಿಮಾನಗಳು ಪಾಕಿಸ್ತಾನದ ಕಡೆ ಹಾರಿ ಹೋದವು. ಬಟ್ಟು ಎದ್ದು, ಸಿಗರೇಟ್ ಹಚ್ಚಿ ಸುತ್ತಲೂ ನೋಡಿದ ಇತರ ಕೆಲವು ವಾಹನಗಳಂತೆ ಜೀಪ್ ಸಹ ಹತ್ತಿಕೊಂಡು ಉರಿಯುತ್ತಿತ್ತು. ಡ್ರೈವರ್ ಕಾಣಲಿಲ್ಲ. ಕಾರಣ ಬಯಲಿಗಿಂತ ಜೀಪ್

ಕೆಳಗೇ ಕ್ಷೇಮ ಅಂತ ಅವನು ಅದರಡಿ ತೂರಿದ್ದ ಜೀಪಿನೊಡನೆ ಅವನೂ ಭಸ್ಮವಾಗಿದ್ದ! ಭಟ್ಟು ನಿರ್ಲಿಪ್ತನಾಗಿ ಆಕಾಶ ನೋಡುತ್ತ ನಿಂತಿದ್ದ!.....

ಇನ್ನು ಕಡೆಯ camp ವಿಶೇಷ... 1949 ಆದರೂ ಎರಡನೇ ಮಹಾಯುದ್ಧ ಎಲ್ಲರ ಮನಸ್ಸಿನಲ್ಲೂ ತುಂಬಿಕೊಂಡಿತ್ತು. ಅದರಲ್ಲೂ ಬರ್ಮಾದೇಶದಲ್ಲಿ ಏಟುತಿಂದು ಹಿಮ್ಮೆಟ್ಟಿ ನಂತರ 'ಕಾಡಿನ ಸಮರ' (Jungle Warfare) ವಿಧಾನವನ್ನು ವೃದ್ಧಿಪಡಿಸಿ ಜಪಾನಿನ ಮೇಲೆ ಜಯಗಳಿಸಿದ್ದು ಅಳಿಸಲಾರದ ಪಾಠ ಆಗಿತ್ತು. ಇದರಲ್ಲಿ ಪರಿಣಿತನಾಗಿ ಕೀರ್ತಿ ಪಡೆದವನು ಬ್ರಿಗೇಡಿಯರ್ ವಿನ್‌ಗೇಟ್ (Wingate) ಎನ್ನುವ ಆಂಗ್ಲ ಅಧಿಕಾರಿ. ಅವನು ಯುದ್ಧದಲ್ಲಿ ಸತ್ತರೂ, ಅವನು ಕಾಡಿನಲ್ಲಿ ಮೈಲಿಗಟ್ಟಲೆ ಮತ್ತು ದಿನಗಳ ಗಟ್ಟಲೆ ನಡೆದು, ವಾಹನ ಸಹಾಯವಿಲ್ಲದೆ ಬೇಕಾದ ಮದ್ದು, ಗುಂಡು, ಆಹಾರ ಸಾಮಗ್ರಿ, ಶಸ್ತ್ರಾಸ್ತ್ರಗಳು ಎಲ್ಲವನ್ನೂ ಸೈನಿಕರೇ ಅವರ ಬೆನ್ನಿನ ಮೇಲೆ ಹೊತ್ತು ನಡೆದು ಶತ್ರು ಸ್ಥಾನಗಳನ್ನು ಧ್ವಂಸಮಾಡುವ ಸಮರ ವಿದ್ಯೆಯನ್ನು ರೂಢಿ ಪಡಿಸಿದ್ದ. ಇದಕ್ಕೆ "Chindits Campaign' ಎಂದು ಹೆಸರು ಬಂದಿತ್ತು. ಕಡೆಗೆ ಅದೇ Chindits tactics ಅಂತ ಮಿಲಿಟರಿ ಅಕಾಡಮಿಯಲ್ಲಿ ಪಾಠಕ್ರಮವೂ ಆಗಿತ್ತು ನಮ್ಮ ಕಡೇ ಅಭ್ಯಾಸ ಈ 'ಚಿಂಡಿಟ್' camp ಅಂತಲೇ ಹೆಸರಿಸಿಕೊಂಡಿತ್ತು.

ಮೊದಲೆರಡು campಗಳಲ್ಲಿ ನಮ್ಮ ಊಟ, ವಸತಿ, ಎಲ್ಲಾ ವಾಹನಗಳಲ್ಲಿ ಗೊತ್ತಾದ ಸ್ಥಳಗಳಿಗೆ ಮೊದಲೇ ಸೇರುತ್ತಿದ್ದವು. ನಾವು ಕಾಲ್ನಡಿಗೆಯಲ್ಲಿ ಅಭ್ಯಾಸ ಮಾಡುತ್ತಾ ಸಂಜೆ ಹೊತ್ತಿಗೆ ಈ ಜಾಗಗಳನ್ನು ಸೇರುತ್ತಿದ್ದೆವು. ಬಿಸಿ ಊಟ, ಸುಖ ನಿದ್ರೆ ಸಿಗುತ್ತಿತ್ತು (ಎರಡನೇ campನಲ್ಲಿ ಮಾತ್ರ ಮೂರು ದಿನ Night march ಆದಮೇಲೆ ನಾವೇ ನಮ್ಮ ನಮ್ಮ ground sheet ಗಳನ್ನು ಸೇರಿಸಿ 'ಬೆವಿ' (Bivoue) ಗಳನ್ನು ಮಾಡಿ, ಇಬ್ಬರಿಬ್ಬರು ಒಂದು ಬೆವಿ ಒಳಗೆ ತೂರುತ್ತಿದ್ದೆವು ಅನ್ನಿ). ಆದರೆ ಮೊದಲೇ ಹೇಳಿದಂತೆ ಚಿಂಡಿಟ್ ಭಿನ್ನ. ನಾವಿದ್ದ ವರ್ಷ ಮೊಟ್ಟಮೊದಲಿಗೆ ಅಧಿಕಾರಿಗಳು ನಮಗೆ ದಿನಭತ್ಯವನ್ನು ಹಣದ ಮೂಲಕ ಕೊಟ್ಟು, ನಮಗೆ ಬೇಕಾದ ಊಟದ ಸಾಮಾಗ್ರಿಗಳನ್ನು ಖರೀದಿಸಿ ತೆಗೆದುಕೊಂಡು ಹೋಗುವಂತೆ ತಾಕೀತು ಮಾಡಿದ್ದರು. ಹೀಗೆ ನಮಗೆ ಬೇಕಾದ ಬಟ್ಟೆ ಬರೆ, ಕಂಬಳಿ ground sheet, ಮಚ್ಚು, ಕತ್ತಿ, ಬಂದೂಕು ಎಲ್ಲವನ್ನೂ ನಾವೇ ಹೊತ್ತುಕೊಂಡು ಹೋಗಬೇಕಾಗಿತ್ತು. ಒಟ್ಟಿನಲ್ಲಿ ಬರ್ಮಾ ದೇಶದಲ್ಲಿ ನೆಡೆದ ಚಿಂಡಿಟ್ campaign ನಿನ ಅನುಕರಣೆಯ ಪ್ರಯತ್ನ ಈ campಗೆ ನಮ್ಮ "uncle' ಗಳ ಕಂಪೆನಿ ಅಲ್ಲದೆ 'ಪಡ್ಡೆಗಳ' 4ನೇ term (final term) ನ ಸದಸ್ಯರೂ ತುಕಡಿಗಳೂ ಭಾಗವಹಿಸಿದ್ದವು.

ಒಂದೊಂದು ಗುಂಪಿನವರು ಕಲೆತು ಏನು ಖಾದ್ಯ ಪದಾರ್ಥಗಳನ್ನು ತೆಗೆದುಕೊಂಡು ಹೋಗಬೇಕೆಂದು ಯೋಚಿಸಿಕೊಂಡರು 'ಪಡ್ಡೆಗಳು' ಭಾರ ಕಡಿಮೆ ಆಗಲಿ ಅಂತ ಚಾಕಲೇಟ್, ಶಕ್ಕರ್ ಪಾರ (ಶಂಕರ ಪೋಳಿ) ಬಿಸ್ಕತ್, ಕಡೆಲೆಕಾಯಿಬೀಜ.... ಇತ್ಯಾದಿ ಆರಿಸಿಕೊಂಡರು. ಅದರಂತೆ ಮೈಮೇಲಿನ ಭಾರ ಆದಷ್ಟು ತಗ್ಗಿಸುವುದಕ್ಕೆ ಕಂಬಳಿ, sheet ಗಳಲ್ಲೂ ಖೋತಾ ಮಾಡಿಕೊಂಡರು ನಾವುಗಳು ಒಂದು ವಾರದ ಕಠಿಣ ಪರಿಶ್ರಮಕ್ಕೆ

ಕಡಲೇಕಾಯಿಬೀಜ, ಬಿಸ್ಕತ್ ಇವುಗಳು ಯಾವ ಮೂಲೆಗೆ ಎಂದು ಸಾಧಾರಣ ಆಹಾರ ಪದಾರ್ಥಗಳು ಅಂದರೆ ಅಕ್ಕಿ, ಬೇಳೆ, ಹಿಟ್ಟು, ಆಲೂ, ಈರುಳ್ಳಿ, ಇತ್ಯಾದಿ ಆರಿಸಿಕೊಂಡೆವು. ಬಟ್ಟೆ ಬರೆಯಲ್ಲೂ ಖೋತ ಮಾಡಲಿಲ್ಲ.

ಹೊರಡುವ ಹಿಂದಿನ ಸಂಜೆ ಎಲ್ಲರೂ parade ನಲ್ಲಿ ನಿಂತೆವು. ನಮ್ಮ ನಮ್ಮ ಪಾಲಿನ ಸಾಮಾನುಗಳನ್ನು ಹೊತ್ತಿದ್ದೆವು. ನಾವು ಸರಾಸರಿ 35-40 ಪೌಂಡ್ (ಸುಮಾರು 20 ಕೆ.ಜಿ) ಬೆನ್ನಿನ ಮೇಲೆ ಹೊತ್ತಿದ್ದೆವು. ಬಾಕಿಯವರು ಜಾಸ್ತಿ ಅಂದರೆ 10-12 ಪೌಂಡ್ ಹೇರಿಕೊಂಡಿದ್ದರು. Attention' ಎಂಬ ಆಜ್ಞೆ ಬಂದೊಡನೆ ಸೆಟೆದು ನಿಂತಾಗ ನಮ್ಮಲ್ಲಿ 3-4 ಜನ ಹಿಂದಕ್ಕೆ ಬಿದ್ದರು. ಬೆನ್ನಿನ ಭಾರ ಬಗ್ಗಿದ್ದರಿಂದ ಏಳಲು ಸಹಾಯ ಬೇಕಾಯಿತು. ಪಡ್ಡೆಗಳಿಗೆ ಮುಸಿನಗು! ಆದರೂ ನಿರ್ಧಾರ ಬದಲಾಯಿಸಲಿಲ್ಲ. ಸರಿ campಗೆ ಹೊರಟೆವು.

ಮೊದಲ ಮೂರು ದಿನ ವಿಶೇಷವಾದ ಘಟನೆಗಳೇನೂ ನಡೆಯಲಿಲ್ಲ. ಚಿಕ್ಕ ಚಿಕ್ಕ ತುಕಡಿಗಳಲ್ಲಿ ನಡೆಯುತ್ತಾ ಒಬ್ಬರನ್ನೊಬ್ಬರು ಅರಸುತ್ತಾ, ಅಲ್ಲಲ್ಲಿ ambush ಹಾಕಿ ಬಾಕಿಯವರನ್ನು ಹುಸಿ ಗುಂಡಿನ ಧಾಳಿಗೆ ಸಿಕ್ಕಿಸುತ್ತ ನಡೆದೆವು. ರಾತ್ರಿ ತಂಗಿದಾಗ ಅಡಿಗೆ ಮಾಡಿ ತಿಂದು ಮಲಗುತ್ತಿದ್ದೆವು. ಪಡ್ಡೆಗಳಿಗೆ ಮೊದಮೊದಲು ನಮ್ಮನ್ನು ಕಂಡರೆ ತಾತ್ಸಾರ ಉಕ್ಕುತ್ತಿತ್ತು. ಈ ಬಕರಾಗಳಿಗೆ ಹಸಿವು ತಡೆಯುವ ಶಕ್ತಿ ಇಲ್ಲ ಅಂತ. ಆದರೆ ದಿನ ಕಳೆದಂತೆ ಅವರ ಚಾಕಲೇಟು ಬಿಸ್ಕತ್ತುಗಳು ಮುಗಿಯುತ್ತಿದ್ದಂತೆ ಹೊಟ್ಟೆ ಚುರುಗುಟ್ಟಲು ಷುರು ಆಗಿರಬೇಕು. ನಾವುಗಳು ತಂಗಿದ್ದ ಜಾಗಗಳತ್ತ ಸುಳಿಯತೊಡಗಿದರು. ತಾತ್ಸರದ ನಗೆ ದೇಶಾವರ ಆಯಿತು. ಕ್ರಮೇಣ ಹಲ್ಲುಗಳು ಗಿಂಜತೊಡಗಿದವು. ಕ್ರಮವಾಗಿ ಗೋಗರಿಕೆ ಆಮೇಲೆ pure and simple begging ಗೆ ಇಳಿದುಬಿಟ್ಟರು. ಕಡೇ ಎರಡು ದಿನ ಅವರ ಪಾಡು ನೋಡಲಾರದೆ ''ಮುಸರೆ ತೊಳೆದರೆ ಊಟ'' ಎಂದೆವು. ನಾನು ಮುಂದು, ತಾನು ಮುಂದು ಎಂದು ಬಂದರು!

ಮೂರು ದಿನ ಆದ ಮೇಲೆ ಟೋಲಿಗಳು ಕೂಡಿಕೊಂಡು ಎರಡು ಗುಂಪುಗಳಾದವು. ನದಿಯ ಆಚೆ, ಈಚೆ ದಡಗಳಲ್ಲಿ trench ತೋಡಲು ಷುರು ಮಾಡಿದವು. ಒಬ್ಬರ ತಾಣ ಇನ್ನೊಬ್ಬರಿಗೆ ಗೊತ್ತಾಗದ ಹಾಗೆ... ಸರಿ ಎದುರಾಳಿಯ ಚಲನವಲನ, ಅವರ ಶಸ್ತ್ರಗಳ ಅಳವಡಿಕೆ, ಅವರ ತಾಣದ ವ್ಯಾಸ.. ಇತ್ಯಾದಿ ಇತ್ಯಾದಿ ತಿಳಿದುಕೊಂಡು ಬರಲು ಎರಡು ಕಡೆಯವರೂ ಬೇಹುಗಾರರನ್ನೂ ಕಳುಹಿಸಲು ಷುರು ಮಾಡಿದರು. ನಮ್ಮ ಗುಂಪು ಎದುರಾಳಿಗಳ ಮೇಲೆ ಮಾರನೆಯ ದಿನ ಬೆಳಗಿನ ಝಾವ ನದಿ ದಾಟಿ ಧಾಳಿ ಮಾಡಬೇಕೆಂದು ಅಧಿಕಾರಿಗಳು ನಿರ್ಧರಿಸಿದರು. ಹಿಂದಿನ ದಿನದ ಬೇಹುಗಾರಿಕೆ ಸರದಿ ನನಗೆ ಮತ್ತು ಇನ್ನೊಬ್ಬ ಸಂಗಾತಿಗೆ ಬಂತು... ಸ್ಥಳೀಯ ಗ್ರಾಮಸ್ಥರಂತೆ ವೇಷಧರಿಸಿ, ಎದುರಾಳಿಯ ತಾಣವನ್ನು ವೀಕ್ಷಿಸಿ ಅವರ ಚಲನವಲನ ಗಮನಿಸಲು ಮರ ಏರಿ ಕುಳಿತೆವು. ಹೊತ್ತು ಕಳೆದಂತೆ ಬೇಸರ ಷುರು ಆಯಿತು. ಆಗ ಎದುರಾಳಿಯ ಕಡೆಯ ಕೆಲವರು ಮರದ ಕೆಳಗೆ ಬಂದರು ಹುಡುಗು ಬುದ್ಧಿ ಅನ್ನಿ. ಪಡ್ಡೆಗಳ ಗಾಳಿಯ ಸೊಂಕು ಅನ್ನಿ ಇಬ್ಬರೂ ಕಿಲಕಿಲನೆ ನಗಲು ಷುರು ಮಾಡಿದೆವು. ಮೇಲೆ ನೋಡಿದರು ಮೂಗು

ಮುರಿದೆವು. ಬಂಧಿಗಳಾಗಿ ಅವರ ನಾಯಕನತ್ತ ಕರೆದೊಯ್ದು ಕಾರಾಗೃಹದಲ್ಲಿ ಹಾಕಿದರು. ನಮ್ಮ ಕಾರಾಗೃಹ ಅಲ್ಲಿದ್ದ emerganey medical truck! ನಮ್ಮವರು ಬೆಳಗಿನ ಛಳಿಯಲ್ಲಿ ಕೊರೆಯುವ ನದಿ ನೀರಿನಲ್ಲಿ ಮೊಳಕಾಲವರೆಗೂ ಇಳಿದು ನಡೆದು ಧಾಳಿ ನಡೆಸಿದಾಗ ನಾವಿಬ್ಬರೂ 'ಕಾರಾಗೃಹದಲ್ಲಿ' ಕಂಬಳಿಗಳ ಮಧ್ಯೆ ಬೆಚ್ಚಗೆ ಗೊರಕೆ ಹೊಡೆಯುತ್ತಿದ್ದೆವು.

ಧಾಳಿ ಆದಮೇಲೆ ಅಭ್ಯಾಸ ಮುಗಿದ ಹಾಗೆ. ಆದರೂ ರಾತ್ರಿ ಕಳೆದು ಬೆಳಗ್ಗೆ ಅಕಾಡೆಮಿ ಕಡೆ ಹೋಗಬೇಕು. ಮಾರನೇ ದಿನ ಮತ್ತೆ ನಮ್ಮನ್ನು 5-6 ಜನರ ಗುಂಪುಗಳಾಗಿ ವಿಂಗಡಿಸಿ, ಯಾರು ಮೊದಲು ಅಕಾಡಮಿ ಸೇರುವರೋ ನೋಡೋಣ ಎಂದು ಸವಾಲು ಹಾಕಿದರು. ಒಂದೇ ಒಂದು ನಿಯಮವೆಂದರೆ ತಿಳಿದ ಕಾಲುದಾರಿ ಆಗಲಿ, ರಸ್ತೆ ಆಗಲಿ ಉಪಯೋಗಿಸಕೂಡದು. ನೆಟ್ಟಗೆ ಪರ್ವತ ಶ್ರೇಣಿ ತಲುಪಿ, ಸರಿಯಾದ ಬೆಟ್ಟದ ಝರಿ ಒಂದರ ಜಾಡು ಹಿಡಿದು, ಬೆಟ್ಟ ಏರಿ ಮತ್ತೆ ಇಳಿದು ಕಾಡು ಆಮೇಲೆ ಟೀ ಗಾರ್ಡನ್ ಮೂಲಕ ಹೋಗಬೇಕಾಗಿತ್ತು.

ಸರಿ... ನಮ್ಮ ಗುಂಪಿಗೆ ಸರಿಯಾದ ಝರಿ ಸಿಗಲಿಲ್ಲ.. ಯಾವ ಜಾಡು ಹಿಡಿದು ಹೋದರೂ ಗೋಡೆಯಂತೆ ಬೆಟ್ಟ ಅಡ್ಡ ಬರುತ್ತಿತ್ತು. ಮಧ್ಯಾಹ್ನ 3 ಘಂಟೆ ಸಮಯಕ್ಕೆ ಸುಸ್ತಾಗಿ ಇದ್ದ ಬದ್ದ pack lunch ಮುಗಿಸಿ. ರಾತ್ರಿ ಅಲ್ಲೇ ತಂಗುವ ಅಂತ ಯೋಚಿಸುತ್ತಿದ್ದೆವು. ನಿರ್ಜನ ಪ್ರದೇಶ ಮೇಲಾಗಿ ಕಾಡು ಪ್ರಾಣಿಗಳ ತಾಣ. ಆದರೆ ಏನು ಮಾಡುವುದು? ನಮ್ಮ ಹಾಗೆ ಇನ್ನೂ ಎರಡು, ಮೂರು ಗುಂಪುಗಳು ಬಂದವು. ಒಟ್ಟುಗೂಡಿದೆವು. ಧೈರ್ಯ ಬಂತು. ಜೊತೆಗೆ ಬೆಟ್ಟದ ತುದಿಯ ಮೇಲೆ ಸಾಲಾಗಿ ಬಾಕಿ ಹುಡುಗರು ಹೋಗುತ್ತಿರುವುದು ಕಾಣಿಸಿತು. ಆಗ ನಾನು ಇನ್ನೂ ಒಂದು ಸಲ ಪ್ರಯತ್ನಿಸೋಣ ಎಂದು ಹೇಳಿ, ಮುಂಚೆ ಪರೀಕ್ಷಿಸಿದ್ದ ಝರಿಗಳನ್ನು ಬಿಟ್ಟು ಬೇರೆ ಒಂದರ ಕಡೆ ಹೊರಟೆ ಅಲ್ಲೂ ಗೋಡೆ! ಆದರೆ ಗೋಡೆ ಅಂಟಿದ ಹಾಗೆ ಬೇಕಾದಷ್ಟು ಬಳ್ಳಿಗಳಿದ್ದವು ಅಕಾಡಮಿಯಲ್ಲಿ ಕಲಿತಿದ್ದ Rope Climbing ಸಹಾಯವಾಯಿತು ಎರಡು ಬಳ್ಳಿ ಹಿಡಿದು ಕಾಲು ಬೆಟ್ಟಕ್ಕೆ ಕೊಟ್ಟು ಕಷ್ಟಪಟ್ಟು ಮೇಲೆ ಏರಿದೆ. ನೋಡಿದೆ ಸಂತೋಷ ತಾಳಲಾರದೆ ಕಿರುಚಿದೆ. ಆಚೆ ಕಡೆ ಕಾಡಿನ ಮರಗಳ ಅಂಚಿನಲ್ಲಿ ದೂರದಲ್ಲಿ ಸಂಜೆ ಬೆಳಕಿನಲ್ಲಿ ಅಕಾಡಮಿ ಕಟ್ಟಡದ ಗೋಪುರ ಹೊಳೆಯುತ್ತಿತ್ತು! ಸುಮಾರು 5-6 ಮೈಲಿ ದೂರ ಇರಬಹುದೆಂದು ಲೆಕ್ಕ ಹಾಕಿದೆ. ನನ್ನ ಕೂಗು ಇತರರನ್ನೂ ಪುರಿದುಂಬಿಸಿತು. ಒಬ್ಬೊಬ್ಬರಾಗಿ ಮೇಲೆ ಬಂದರು ಅಲ್ಲೇ ಒಂದು ಬೆಟ್ಟದ ಝರಿ ಆಚೆಕಡೆಗೆ ಉದ್ಭವವಾಗಿತ್ತು. ಘಾಯ, ಗೀಯ ಲೆಕ್ಕಿಸದೆ ಎಲ್ಲರೂ ಕೂತು ಕಲ್ಲು ಮುಳ್ಳುಗಳ ಮಧ್ಯೆ ಜಾರೋ ಬಂಡಿಯ ತರಹ ಜಾರಿ ತಪ್ಪಲು ತಲುಪಿದೆವು. ಮುಂದೇನು..... ಕಾಡುದಾರಿ ಹಿಡಿದು ಟೀ ಗಾರ್ಡನ್ ದಾಟಿ ಸುಮಾರು 7, 7.30ಕ್ಕೆ ಅಕಾಡಮಿ ತಲುಪಿದೆವು. ಭವ್ಯ ಸ್ವಾಗತ ಕಾದಿತ್ತು. ಕಾಯುತ್ತಿದ್ದವರ ಮುಖದ ಮೇಲಿನ ಆತಂಕ ಮಾಯವಾಯಿತು. ನಮ್ಮನ್ನು ಹುಡುಕಲು ಹೊರಡಲು ಒಂದು ಘೂರ್ಕಾ ಸೈನಿಕರ ತಂಡ ಸಿದ್ಧವಾಗಿತ್ತು. ಸಂತಸದ ಹೊನಲಿನಲ್ಲಿ ನಾವುಗಳೂ ಸಹ ಹೀರೋಗಳಂತೆ ಮೆರೆದೆವು.

ನಿಮ್ಮಮ್ಮಲ್ಲಿ

ಸಂಪಾದಕರು

ಅಪರಂಜಿ

ಮಾನ್ಯರೇ

'ಹಾಯ್ ಹಾಯ್'

ಮೇ ತಿಂಗಳಿನ ಬೇಸಿಗೆಯಲ್ಲಿ ಮೈಮನಗಳು ಸುಡುತ್ತಿರುವಾಗ ತಂಗಾಳಿ ಬೀಸಿದಾಗ ಒಂದು ರೀತಿಯ ಹೇಳಿಕೊಳ್ಳಲಾಗದಂತಹ ಹಿತವಾದ ಅನುಭವವಾಗುತ್ತದೆ. ಈ ಅನುಭವವನ್ನು 'ಹಾಯ್' ಅಂತ ವರ್ಣಿಸುವುದು ವಾಡಿಕೆ. Downwith ಅರ್ಥದಲ್ಲಿ ಖಂಡಿತ ಅಲ್ಲ! ಆದ್ದರಿಂದ ವಿಜಯಾ ಸಚ್ಚಿದಾನಂದರವರ Thanks ಅನ್ನು ನನ್ನ ಬಗಲಿಗೆ ಸೇರಿಸಿ ಮತ್ತೊಮ್ಮೆ ಅವರಿಗೆ 'ಹಾಯ್ ಹಾಯ್' (ಎರಡೇಸಲ) ಅಭಿನಂದನೆ ಸಲ್ಲಿಸುತ್ತೇನೆ!

ಕಬ್ಬಿಣದ ಕಡಲೆ ಸಂಗಡ....

ಅಪರಂಜಿಯಲ್ಲಿ ಪುಸ್ತಕ ವಿಮರ್ಶೆ ಬೇಕೋಬೇಡವೋ? ಎಲ್ಲಾ ಪತ್ರಿಕೆಗಳಲ್ಲೂ ನಡೆಸುವ ಪುಸ್ತಕಗಳ ವಿಮರ್ಶೆಯೇ ಆದರೆ ಬೇರೆ. ಏಕೆಂದರೆ ಬೇರೆ ಪತ್ರಿಕೆಯ ವಿಮರ್ಶೆಗಳು ಇಲ್ಲೂ ಮರುಕಳಿಸುವ ಸಾಧ್ಯತೆ ಇರುತ್ತದೆ! ಬೇರೆ ಪತ್ರಿಕೆಗಳು ಅಷ್ಟಾಗಿ ವಿಮರ್ಶಿಸದ ಪುಸ್ತಕಗಳ ವಿಮರ್ಶೆ ನಡೆಸಿದರೆ ಕೆಲವು ಜನರಿಗಾದರೂ ಬೇರೆಯವರು ಗಮನಿಸದ ಪುಸ್ತಕಗಳ ಕಡೆಗೆ ಗಮನ ಹರಿದೀತು. ಸಾಹಿತ್ಯ ಸಂಚಿಕೆಗಳು, ಸಾಹಿತ್ಯ ಪುರವಣಿಗಳು ಮತ್ತು ಅಕಾಡೆಮಿಕ್ ನಿಯತಕಾಲಿಕಗಳು ಈಗ ಅಲಕ್ಷ್ಯ ಮಾಡುತ್ತಿರುವ ಪ್ರಕಾರವೆಂದರೆ ಹಾಸ್ಯ. ಅದರಿಂದ ಅಪರಂಜಿಯಲ್ಲಿ ಹಾಸ್ಯ ಪುಸ್ತಕಗಳಿಗೆ ಗಂಭೀರ ಪುಸ್ತಕಗಳ ಸಂಗಡ ಗಂಭೀರ ಚಿಂತನೆ ನೀಡುವುದು ಅವಶ್ಯ. ಕಬ್ಬಿಣದ ಕಡಲೆ ಸಂಗಡ ನೆಲಗಡಲೆ ಸಹಾ ಇರಲಿ! ನಮ್ಮ ಕಾಂಪೌಂಡಿನಲ್ಲಿ ಅರಳಿದ ಹೂವುಗಳನ್ನು ನಾವೇ ಗಮನಿಸದಿದ್ದರೆ ಹೇಗೆ?

ಹೆಚ್. ಗೋಪಾಲಕೃಷ್ಣ



‘ಪಂಚ್’ ಮರಳಿ ಮಾರುಕಟ್ಟೆಗೆ

ಶಿವು

ನಾನು ಹಿಂದೆ ಹೇಳಿದಂತೆ "The Fountain head' ಪುಸ್ತಕದಂಗಡಿಗೆ ಹೋಗಿ punch ತಂದದ್ದಾಯಿತು. ನಾನು ಕೊಂಡ ಸಂಚಿಕೆ ‘ವ್ಯಾಲೆಂಟೈನ್ ವೀಕ್ ಸ್ಪೆಷಲ್’. ಸೇಂಟ್ ವ್ಯಾಲೆಂಟೈನ್ ಒಬ್ಬ ಕ್ರಿಶ್ಚಿಯನ್ ಸಂತ. ಫೆಬ್ರವರಿ ಹದಿನಾಲ್ಕರಂದು ಆತನ ಪುಣ್ಯತಿಥಿ. ಸಂತನಿಗೂ ಪ್ರಣಯಕ್ಕೂ ಮೇಲ್ನೋಟಕ್ಕೆ ಯಾವ ಸಂಬಂಧವೂ ಕಾಣದಿದ್ದರೂ, ಫೆಬ್ರವರಿ ಹದಿನಾಲ್ಕರಂದು ಕ್ರಿಶ್ಚಿಯನ್ ಜಗತ್ತಿನ ಎಲ್ಲಾ ಪ್ರೇಮಿಗಳು ಪ್ರಣಯಿಗಳು ಸೇಂಟ್ ವ್ಯಾಲೆಂಟೈನ್ ಡೇ ಆಚರಿಸಿ, ತಮ್ಮ ತಮ್ಮ ಪ್ರಿಯತಮ/ತಮೆ ಯರಿಗೆ ತಮ್ಮ ಅಮಿತ ಪ್ರೇಮವನ್ನು ಪುನರುಚ್ಚರಿಸುವ ಕಾರ್ಡ್‌ಗಳನ್ನು ಕಳಿಸುವುದು ವಾಡಿಕೆ. ಈ punch ಸಂಚಿಕೆಯ ಬಹುತೇಕ ಬರಹಗಳಲ್ಲಿ ಈ ವ್ಯಾಲೆಂಟೈನ್ ಡೇನ ಥೀಮ್ ಒಂದಲ್ಲೊಂದು ರೂಪದಲ್ಲಿ ಕಂಡುಬಂದಿತ್ತು.


"punch' ಪುನಃ ಮಾರುಕಟ್ಟೆಗೆ ಬಂದದ್ದು, ಒಬ್ಬ ಹಳೆಯ ಮಿತ್ರನನ್ನು ಪುನಃ ಭೇಟಿ ಮಾಡಿದಷ್ಟು ಉಲ್ಲಾಸ ತರುವ ಅನುಭವ. ಸಂಚಿಕೆಯ ಪುಟಗಳನ್ನು ತಿರುವಿದೆ. ಫಾರ್ಮೇಟ್‌ನಲ್ಲೇನೂ ಬದಲಾವಣೆ ಕಾಣಲಿಲ್ಲ. ಸುಮಾರು ಹನ್ನೆರಡು ಪುಟಗಳಷ್ಟು ಜಾಗ ವಿಮರ್ಶೆಗಳಿಗೆ ಮೀಸಲು. ಪುಸ್ತಕಜಗತ್ತು, ಸಿನಿಮಾ, ರಂಗಭೂಮಿ, ಸಂಗೀತ, ಟಿ.ವಿ., ಕಲಾಪ್ರಪಂಚ ಇವುಗಳೆಲ್ಲದರ ಬಗ್ಗೆ ವಿಮರ್ಶೆ, ಪರಿಚಯ ಲೇಖನ ಸಾಕಷ್ಟು ಕಂಡವು. ಅದೇಕೋ ಹಳೆಯ ಪಂಚ್‌ಗಳಲ್ಲಿ ಕಂಡುಬಂದಷ್ಟು ವಿಪುಲವಾಗಿ ರಾಜಕೀಯ ವಿಡಂಬನೆ ಕಾಣಲಿಲ್ಲ. ಈ ಸಂಚಿಕೆಯ Diary ಅಂಕಣದಲ್ಲಿ ನಮ್ಮ ಅಪರಂಜಿ ಕಿಡಿಯಂತೆಯೇ, ಪ್ರಸಕ್ತ ವಿದ್ಯಮಾನಗಳ ಬಗ್ಗೆ ಚೂಪುನಾಲಿಗೆಯ ಟಿಪ್ಪಣಿಗಳು. ಒಂದು ಉದಾಹರಣೆ-ಪ್ರಿನ್ ಚಾರ್ಲ್ಸ್, ವೂಪೀ ಗೋಲ್ಡ್ ಬರ್ಗ್, ಕ್ಯಾಂಟರ್ ಬರಿಯ ಆರ್ಚ್ ಬಿಷಪ್, ಬುಟ್ರೋಸ್ ಬುಟ್ರೋಸ್ ಘಾಲಿ, ಇವರೆಲ್ಲರಿಗೆ common ಆದ ಒಂದು ಹೃದಯ ಬೆಚ್ಚನೆ ಮಾಡುವ ಸಂಗತಿ ಏನು ಅಂತ ಲೇಖಕ ಪ್ರಶ್ನಿಸಿ- ‘ಇವರೆಲ್ಲಾ ನವೆಂಬರ್ 13-15 ರ ಸುಮಾರಿನಲ್ಲಿ ಹುಟ್ಟಿದವರು. ಇದರಲ್ಲಿ ಅಂತಹದೇನು ವಿಶೇಷಾ ಅಂತ ಕೇಳ್ತೀರಾ? ನವೆಂಬರ್ 13-15ರಲ್ಲಿ ಹುಟ್ಟಬೇಕಾದರೆ ಅವರು ಫೆಬ್ರವರಿ 14 ರಂದು ವ್ಯಾಲೆಂಟೈನ್ ಡೇ ದಿನಾನೇ ಕನ್ಸೀವ್ ಆಗಿರಬೇಕು. ಇವರುಗಳೇ ನಿಜವಾಗಿ ಪ್ರೇಮವೃಕ್ಷದ ಫಲಗಳು ಅಂತಾನೆ'' ಅಂಕಣಕಾರ.

ಭಾರತ ನಿಜವಾಗಿಯೂ ಒಂದು ಆಕರ್ಷಕ ಟೂರಿಸ್ಟ್ ಡೆಸ್ಟಿನೇಷನ್ ಅನ್ನೋದರಲ್ಲಿ ಯಾರಿಗಾದರೂ ಸಂಶಯ ಇದ್ರೆ, ಈ ಸಂಚಿಕೇಲಿ ಇರೊ ಎರಡು ಪೂರ್ಣಪುಟ

ಜಾಹಿರಾತುಗಳು ಆ ಸಂಶಯಾನ ಖಂಡಿತಾ ನಿವಾರಿಸೋಕ್ಕೆ ಸಾಧ್ಯ. ಗ್ರೀವ್ಸ್ ಟೂರ್ಸ್ ಅನ್ನೋ ಒಂದು ಇಂಗ್ಲೀಷ್ ಕಂಪನಿ ಐದಾರು ಇಂಡಿಯಾ ಪ್ಯಾಕೇಜ್‌ಗಳನ್ನು ತನ್ನ ಜಾಹಿರಾತಿನಲ್ಲಿ ಆಫರ್ ಮಾಡಿರುವುದನ್ನು ನೋಡಿದೆ. ಹದಿನೇಳು ದಿನಗಳ ಸದರ್ನ್ ಸ್ಪ್ಲೆಂಡರ್‌ನಲ್ಲಿ ಪ್ರವಾಸಿಗರನ್ನು ಮದ್ರಾಸು, ಬೆಂಗಳೂರು, ಮೈಸೂರು, ನಾಗರಹೊಳೆ, ಕೂನೂರು, ಕೊಚ್ಚಿನ್, ತೆಕ್ಕಡಿ, ಮಧುರೆ, ಈ ಊರುಗಳನ್ನೆಲ್ಲಾ ತೋರಿಸ್ತಾರಂತೆ. ಖರ್ಚು ಎಷ್ಟು ಗೊತ್ತೇ? 2159 ಪೌಂಡ್‌ಗಳು. ಅಂದರೆ ಸುಮಾರು ಒಂದೇ ಕಾಲು ಲಕ್ಷ ರೂಪಾಯಿಗಳು ಒಬ್ಬೊಬ್ಬರಿಗೆ! ಅಲ್ಲಾರೀ, ಬೆಂಗಳೂರಿನ ಪದ್ಮಾವತಿ ಗಂಗಾಧರಗೌಡರ ಆಳ್ವಿಕೆಯಲ್ಲಿನ ಪಾಟ್‌ಹೋಲ್‌ಗಳನ್ನು ನೋಡಲು ಈ ಬಿಳೀ ಜನ ಹೀಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡೋದು ನಿಜಕ್ಕೂ ಆಶ್ಚರ್ಯ ಅಲ್ಲವೇ.

ಈ ಸಂಚಿಕೆಯಲ್ಲಿನ ಅನೇಕ ಲೇಖನಗಳು ಇಂದಿನ ಬ್ರಿಟಿಷ್ ಸಮಾಜದ ಮುಕ್ತ ಅಥವಾ ಪರ್ಮಿಸಿವ್ ವಾತಾವರಣವನ್ನು ಪ್ರತಿಬಿಂಬಿಸಿದೆ ಅಂತ ಹೇಳಬಹುದು. ಕೆರಿಯರ್ ತರುಣಿಯರು ಒಂದು ಸಂಜೆ ತಮ್ಮ ಪ್ರಿಯಕರನೊಂದಿಗೆ ಕಳೆಯಬೇಕಾದರೆ ಏನೆಲ್ಲಾ ಜಾಗ್ರತೆ ವಹಿಸಬೇಕು ಅನ್ನೋದರ ಮೇಲೆ ಒಂದು ಲೇಖನ. ಕಾಂಟಾಕ್ಟ್ ಲೆನ್ಸ್ ಕೇಸ್ ಮರೀಬೇಡಿ, ಏನೇ ಆದ್ರೂ ಒಂದು ಟೂತ್‌ಬ್ರಷ್‌ನ ವ್ಯಾನಿಟಿ ಬ್ಯಾಗ್‌ನಲ್ಲಿಟ್ಕೊಂಡಿರೋದು ಕ್ಷೇಮ ಅಂತೆಲ್ಲಾ ಈ ಅಭಿಸಾರಿಕೆಯರಿಗೆ ಕಿವಿ ಮಾತುಗಳನ್ನು ಲೇಖಕಿ ಹೇಳ್ತಾಳೆ.

ಹಾಗೇ ಪುಟಗಳನ್ನು ತಿರುವಿ ಹಾಕ್ತಾ ಇದ್ದಾಗ ಒಂದು ಸಣ್ಣ ಕಥೆ ಕಣ್ಣಿಗೆ ಬಿತ್ತು. Romance on the underground ಅಂತ ಕಥೆ ಹೆಸರು. ವ್ಯಾಲೆಂಟೈನ್ ವಿಶೇಷ ಸಂಚಿಕೆಗಾಗಿಯೇ ಬರೆದ ಲೇಖನ. ಲಂಡನ್ ನಗರದಲ್ಲಿ ಭೂ ಮಟ್ಟದ ಕೆಳಗೆ ಸುರಂಗಗಳಲ್ಲಿ ಓಡಾಡುವ ಇಲೆಕ್ಟ್ರಿಕ್ ಟ್ರೈನ್‌ಗಳಿಗೆ ಟ್ಯೂಬ್ ಅಥವಾ ಅಂಡರ್ ಗ್ರೌಂಡ್ ಅನ್ನೋದು ವಾಡಿಕೆ. ಬಟ್ಟ ಬೇಸಿಗೆಯಲ್ಲಿ ಹಠಾತ್ತನೆ ಮೇಲೆರಗುವ ಬಿಸಿಲು ಮಳೆಯಂತೆ ಈ ಕಥೆ ನನಗೆ ಅನಿರೀಕ್ಷಿತ ಹರ್ಷತಂದಿತು. ಇಂಗ್ಲೀಷ್ ಭಾಷೆಯ ಸೊಗಡನ್ನು ಕನ್ನಡದ ಕಂಪಿಗೆ ಬದಲಿಸುವುದು ಸುಲಭಸಾಧ್ಯವಲ್ಲ ಎಂಬುದನ್ನು ನಾನು ಬಲ್ಲೆ. ಹಾಗಿದ್ದೂ ಈ ಲೇಖನವನ್ನು ಕನ್ನಡೀಕರಿಸಿ ಅಪರಂಜಿ ಓದುಗರೊಂದಿಗೆ ನನಗಾದ ಅನುಭವವನ್ನು ಹಂಚಿಕೊಳ್ಳುವ ಯತ್ನ ಮಾಡಿದ್ದೇನೆ.



ಹಾಗೆಯೇ, ಈ ಸಂಚಿಕೆಯಿಂದ ಕೆಲವು ಕಾರ್ಟೂನ್‌ಗಳನ್ನು ಇಲ್ಲಿ ಉದ್ಧರಿಸಿದ್ದೇನೆ ಒಟ್ಟಿನಲ್ಲಿ ಶೀನು ಹೇಳಿದಾಗ, ಪಂಚ್ ಎಂದಿದ್ದರೂ ಪಂಚೇ!

ಸುರಂಗದಲ್ಲೊಂದು ಪ್ರಣಯ ಪ್ರಸಂಗ

(ಪಂಚ್ ಕಥೆ)

ಲೂಯೀ ದ ಬೆರ್ನೀಸ್

ಹೆಂಗಸರು ಖಂಡಿತ ನಮ್ ಥರಾ ಅಲ್ಲಾ ಮಗೂ. ಈ ವಿಷಯಾನ ನೀನು ಮೊದಲು ಅರ್ಥ ಮಾಡಿಕೋಬೇಕು. ನೀನು ಅಕ್ಕತಂಗೀರ ಜೊತೆ ಬೆಳೆದೆ ಅಂದ ಮಾತ್ರಕ್ಕೆ ಹೆಂಗಸರ ವಿಷಯ ನಿನಗೆ ಎಲ್ಲಾ ತಿಳಿದಿದೇ ಅಂತ ತಿಳ್ಕೋಬೇಡ. ಅಕ್ಕ ತಂಗೀರಿಗೆ ತಮ್ಮ ಅಣ್ಣ ತಮ್ಮಂದಿರ ಸಂಗಡ ಪ್ರಣಯ ಏನೂ ಇರುಲ್ಲವಲ್ಲ. ಹಾಗಾಗಿ ನೀನು ಪ್ರಣಯ ಮಾಡಬೇಕಾದ ಪರಿಸ್ಥಿತಿ ಒದಗಿದಾಗ ಈ ಅನುಭವಗಳು ಯಾವುದೂ ನಿನ್ನ ನೆರವಿಗೆ ಬರೋದೇ ಇಲ್ಲ.

ನೋಡು ಮಗು, ನಿನಗೆ ಈಗತಾನೇ ಹದಿನಾಲ್ಕು ತುಂಬಿದೆ. ಪ್ರಣಯ ಪ್ರಪಂಚದಲ್ಲಿ ಇದೀಗ ನೀನು ಕಾಲಿಡ್ತಾ ಇದ್ದೀಯ. ಈ ಹಂತದಲ್ಲಿ ಒಂದು ಸತ್ಯ ನಿನಗೆ ಮನವರಿಕೆ ಆಗಬೇಕು. ಅದೇನೆಂದ್ರೆ, ಗಂಡಸು ಹೆಂಗಸನ್ನ ಆಜೀವ ಪರ್ಯಂತ ಅರ್ಥಮಾಡಿಕೊಳ್ಳೋದಕ್ಕೆ ಪ್ರಯತ್ನ ಮಾಡ್ತಾನೇ ಇರ್ತಾನೆ. ಇನ್ನೊಂದು ಸತ್ಯ- ಸಾಯೋ ಸಮಯದಲ್ಲೂ ಸಹ, ಹೆಂಗಸರ ಬಗ್ಗೆ ನಿನ್ನ ತಿಳುವಳಿಕೆ, ಈಗ ನಿನಗಿರೋದಕ್ಕಿಂತ ಹೆಚ್ಚೇನೂ ಇರೋದಿಲ್ಲ. ಮೊನ್ನೆ ನೀನು ಮೊಟ್ಟ ಮೊದಲ ಬಾರಿ, ನಿನ್ನ ಗರ್ಲ್ ಫ್ರೆಂಡ್‌ನ ಕಿಸ್ ಮಾಡಿದ್ಯಂತೆ. ನಿಮ್ಮಮ್ಮ ಹೇಳಿದ್ಲು. ''ಅವನಿಗೆ ಅದೇನೂ ಅಷ್ಟು ಇಷ್ಟ ಆದ ಹಾಗೆ ಕಾಣಿಸ್ಲಿಲ್ಲ'' ಅಂತಾನೂ ಸೇರಿಸಿದ್ಲು. ''ಏನೋ ದಪ್ಪ ಚೂಯಿಂಗ್ ಗಮ್ ತಿಂದ ಹಾಗಿತ್ತಮ್ಮ - ಥೂ!'' ಅಂತ ನೀನು ಹೇಳಿದ್ಯಂತೆ. ನನಗೇನೂ ಆಶ್ಚರ್ಯವಿಲ್ಲ ಮಗು. ಹೆಂಗಸರಿಂದ ನಮಗೇನು ಬೇಕು, ನಾವು ಏನನ್ನು ಬಯಸ್ತೀವಿ ಅನ್ನೋದು ನಮಗೆ ತಿಳಿದೇ ಇರೋದಿಲ್ಲ.

ಹೀಗೆಲ್ಲಾ ಬರೀ ಥಿಯರಿ ಊದೋ ಬದಲು, ನನ್ನದೇ ಒಂದು ಅನುಭವಾನ ನಿನಗೆ ಹೇಳಿದ್ರೆ ವಾಸಿಯೇನೋ ಅನ್ನಿಸುತ್ತೆ. ನಿನಗಿನ್ನೂ ಹದಿನಾಲ್ಕು ವರ್ಷ ಅಂತ ನನಗೆ ಗೊತ್ತು. ನನ್ನಂಥ ಇಳಿ ವಯಸ್ಸಿನವನ ಅನುಭವದಿಂದ ನಿನಗೇನು ಪ್ರಯೋಜನ ಅಂತ ನಿನಗೆ ಅನ್ನಿಸಬಹುದು. ಆದ್ರೂ, ಮಗು, ನಾನು ಈ ಕಥೆ ಹೇಳಿ ಮುಗಿಸೋವರೆಗೂ ನೀನು ಚಿಕ್ಕವ ನಾನು ಹಿರಿಯ ಅನ್ನೋದನ್ನ ಮರೆತುಬಿಡೋಣ. ಆಗ ಬಹುಶಃ ನನ್ನ ಕತೆ ನಿನಗೆ ಇಂಟರೆಸ್ಟಿಂಗ್ ಆಗಿ ಕಾಣಿಸಬಹುದು.

ನನಗೆ ಮೊದಲಿನಿಂದ್ಲೂ, ತರುಣೀರು, ಯುವತೀರು ಅಂದ್ರೆ ಪ್ರಾಣ. ತರುಣಿ, ಯುವತಿ ಅನ್ನೋ ಪದಾನ ಹೇಳಿಕೊಂಡ್ರೇ ಸಾಕು. ಬಾಯಲ್ಲಿ ನೀರೂರತ್ತೆ. ಪಬ್ಲಿಕ್ ಟೆಲಿಫೋನ್‌ನಲ್ಲಿ ಯಾವ್ದಾದ್ರೂ ಚೆಂದುಳ್ಳಿ ತರುಣಿ ಸ್ವಲ್ಪ ಹೊತ್ತು ಮಾತನಾಡಿ ರಿಸೀವರ್ ಇಟ್ಟು ಹೋದಮೇಲೆ, ನಾನು ಆ ರಿಸೀವರ್ ಎತ್ತಿದರೆ, ಅದ್ರಿಂದ ಹೊರಹೊಮ್ಮೋ

ಅವಳ ಸೆಂಟಿನ ಸುಗಂಧ ನನ್ನನ್ನು ಯಾವುದೋ ಕಿನ್ನರಿಯರ ಲೋಕಕ್ಕೆ ಎಳೆದೊಯ್ಯುತ್ತೆ. ನನ್ನ ಕಲ್ಪಾನಾ ಸಾಮ್ರಾಜ್ಯದಲ್ಲಿ ಯಾವಾಗಲೂ ತರುಣೀರು ತುಂಬಿರ್ತಾರೆ. ಕೆಲಸ ಮಾಡೋವಾಗ ಕಾರಿನಲ್ಲಿ ಹೋಗೋವಾಗ, ಕೊನೆಗೆ ಚರ್ಚ್‌ನಲ್ಲಿ ಮಂಡಿಯೂರಿ ಪ್ರಾರ್ಥನೆ ಮಾಡೋವಾಗ ಸಹಾ ಆ ಅಪ್ಸರೆಯರ ಹಾಜರಿ ಯಾವತ್ತೂ ತಪ್ಪೋದಿಲ್ಲ.

ಆಕರ್ಷಕ ತರುಣೀರು ಪ್ರಪಂಚವನ್ನು ತುಂಬಿರ್ತಾರೆ ಅನ್ನೋದು ನಿನಗೆ ಗೊತ್ತು. ಅವರನ್ನ ನೋಡೋದು ಕಣ್ಣಿಗೆ ಹಬ್ಬ ಅನ್ನೋದೂ ನಿಜ. ಆದ್ರೆ ಈ ಗುಂಪಿನಲ್ಲಿ ಕೆಲವೇ ಕೆಲವರು, ನೋಡೋದಕ್ಕೆ ಸಾಧಾರಣವಾಗಿದ್ದರೂ, ನಿನ್ನ ಆಲೋಚನಾ ಸರಣಿಯನ್ನೆಲ್ಲಾ ಜಾಮ್ ಮಾಡಿ, ಭಗವಂತ ಅವರನ್ನ ಸೃಷ್ಟಿಸಿದ್ದಕ್ಕೆ ಅವನಿಗೆ ಅನಂತವಂದನೆ ಸಲ್ಲಿಸ್ತಾ ಇರೋವಂತೆ ಮಾಡೋ ಶಕ್ತಿ ಹೊಂದಿರ್ತಾರೆ. ಇಂತಹ ತರುಣೀರಿಗೆ ಒಂದು ಅಂತಃ ಪ್ರಭೆ ಇರುತ್ತೆ. ಇಂತಹ ಯುವತೀರು ಕಣ್ಣಿಗೆ ಬಿದ್ದರೆ, ಸೂರ್ಯೋದಯದಲ್ಲಿ ಮೂಡಲ ದಿಕ್ಕಿನ ಬೆಟ್ಟಗಳ ಅಂಚಿನ ಚಿನ್ನದ ಮೆರಗು, ಬೆಳದಿಂಗಳ ಸಂಜೆ, ಮೆಲ್ಲನೆ ಮೈಯ್ಯನ್ನು ಸವರಿ ಪುಳಕಗೊಳಿಸುವ ತಂಗಾಳಿ ಇವೆಲ್ಲಾ ನೆನಪಿಗೆ ಬರುತ್ತೆ. ಒಟ್ಟಿನಲ್ಲಿ ಇಂತಹ ತರುಣೀರನ್ನು ನೋಡಿದಾಗಲೇ, ಸಾರ್ಥಕತೆ ಅನ್ನುವ ಪದದ ನಿಜವಾದ ಅರ್ಥ ಅರಿವಾಗೋದು. ಈಗ ನಾನು ನಿನಗೆ ಹೇಳುಕ್ಕೆ ಹೊರಟಿರೋದು ಅಂತಹ ಒಬ್ಬ ತರುಣಿ ವಿಚಾರಾನ.

★★★★

ಬಹು ಹಿಂದೆ ಒಮ್ಮೆ ನಾನು ಸುರಂಗದ ಟ್ರೈನ್ ಹಿಡಿದು ಏರ್‌ಪೋರ್ಟ್‌ಗೆ ಹೊರಟಿದ್ದೆ. ಕೇವಲ ಒಂದು ದಿನದ ಮಟ್ಟಿಗೆ ನಾನು ಬೇರೆ ಊರಿಗೆ ಹೋಗಬೇಕಾಗಿತ್ತು. ಹಾಗಾಗಿ ನನ್ನ ಹ್ಯಾಂಡ್‌ಬ್ಯಾಗ್ ಬಿಟ್ಟು ನನ್ನಲ್ಲಿ ಬೇರೇನೋ ಲಗೇಜ್ ಇರಲಿಲ್ಲ. ಏರ್‌ಪೋರ್ಟ್‌ಗೆ ಹೋಗೋ ಟ್ರೈನ್ ಅಂದ್ರೆ ಗೊತ್ತಲ್ಲ. ಯಾವ್ಯಾವ್ದೊ ಬೇರೆ ಬೇರೆ ದೇಶದೋರು. ಬೇರೆ ಬೇರೆ ಭಾಷೆ. ಏಲ್(Aile)ನಲ್ಲಿ ದೊಡ್ಡ ದೊಡ್ಡ ಸೂಟ್‌ಕೇಸ್‌ಗಳು, ಒಟ್ನಲ್ಲಿ ಪ್ರಯಾಣಕ್ಕಿಂತ ಪ್ರಯಾಸ ಜಾಸ್ತಿ ಅನ್ನೋ ಹಾಗಿತ್ತು ಆ ಟ್ರೈನ್ ಸವಾರಿ.

ಹಾಗೆ ಕೂತಿದ್ದಾಗ ಅವಳು ಮೊಟ್ಟಮೊದಲ ಬಾರಿ ನನ್ನ ಕಣ್ಣಿಗೆ ಬಿದ್ದಳು. ನನ್ನ ಇದಿರು ಸಾಲಿನಲ್ಲಿ ಬಾಗಿಲು ಪಕ್ಕದಲ್ಲಿರೋ ಗಾಜಿನ ಪಾರ್ಟಿಷನ್‌ಗೆ ತಲೆ ಒರಗಿಸಿ ಕುಳಿತಿದ್ದಳು ಆ ತರುಣಿ. ಏರ್‌ಪೋರ್ಟ್‌ಗೆ ಹೋಗುವ ಪ್ರಯಾಣಿಕರಲ್ಲಿ ಸಾಮಾನ್ಯವಾಗಿ ಕಾಣಬಹುದಾದಂತಹ, ಯಾವುದೇ ಟೆನ್ಷನ್, ಆತಂಕ ಅವಳ ಮುಖದಲ್ಲಿ ಇರಲಿಲ್ಲ. ಬಹಳ ಪ್ರಶಾಂತವಾಗಿತ್ತು ಆ ಮುಖ.

ನಾನು ಅವಳನ್ನ ನೋಡಿದೆ. ಅವಳನ್ನು ನೋಡದೇ ಇರೋದು ಸಾಧ್ಯಾನೇ ಇರಲಿಲ್ಲ. ಒಂದು ಹಕ್ಕಿ ಗೂಡು ಕಟ್ಟೋ ಹಾಗೆ, ಒಂದು ಕುದುರೆ ಓಡೋ ಹಾಗೆ, ನಾವುಗಳು ಬಹಳ ಸಹಜವಾಗಿ ತರುಣೀರನ್ನ ನೋಡಿಬಿಡ್ತೇವೆ. ನೋಡೋದು ಅಂದ್ರೆ, ಇಡೀ ದೇಹಾನ ನುಂಗೋ ಹಾಗೆ ದೃಷ್ಟಿಸಿ ನೋಡೋದಲ್ಲ. ಅದು ತೀರಾ ಅಸಭ್ಯ ವರ್ತನೆ. ನಮ್ಮಂತಹ

ಪಳಗಿದವರ ನೋಟ, ನೋಡಿಯೂ ನೋಡದಂತಹ ನೋಟ. ಅವಳಿಗೆ ಒಂದು ಚೂರು ಮುಜುಗರವಾಗದ ಹಾಗೆ, ಆಗೊಂದು ಈಗೊಂದು ಹೂನೋಟ ಬೀರಿ ನನ್ನ ಕಣ್ಣನ್ನ ತುಂಬಿಸಿಕೊಳ್ತಾ ಇದ್ದೆ. ಹಾಗಿದ್ರೂ ಅವ್ಳು, ನಾನು ನೋಡ್ತಾ ಇದ್ದದ್ದನ್ನು ಒಮ್ಮೆ ನೋಟೀಸ್ ಮಾಡಿಬಿಟ್ಲು. ಆಮೇಲೆ ಎರಡು ನಿಮಿಷ ಅವಳೇ ನನ್ನನ್ನ ನೇರವಾಗಿ ದೃಷ್ಟಿಸಿ ನೋಡಿದಳು. ಅಬ್ಬ! ಅದೆಂತಹ ನೋಟ. ಜೂಆಲಜಿ ಕ್ಲಾಸ್‌ನಲ್ಲಿ ಮೈಕ್ರೋಸ್ಕೋಪ್ ಕೆಳಗೆ ಕ್ರಿಮಿಗಳನ್ನು ನೋಡ್ತೊಲ್ಲವೇ ಅಂತಹ ನೋಟ ಅದು. ನಾನೇ ನಾಚಿಕೆಯಿಂದ ಕಣ್ಣುಗಳನ್ನು ಆಚೆ ಹಾಯಿಸಬೇಕಾಯ್ತು.

ಆಕೆಯ ಕಣ್ಣುಗಳು ತೀರಾ ಕಪ್ಪು. ತೀಡಿದ ಹುಬ್ಬುಗಳು ಖ್ಯಾತ ವರ್ಣಚಿತ್ರ ಕಾರರ ಮಾಸ್ಟರ್ ಪೀಸ್‌ಗಳನ್ನು ನೆನಪಿಗೆ ತರುತ್ತಿದ್ದವು. ಸ್ವಲ್ಪ ಕೋಲುಮುಖ, ಚೂಪು ಎನ್ನಬಹುದಾದ ಮೂಗು. ಯಾವುದೋ ಹಳೆಯ ನಗುವಿನ ನೆನಪು ತುಟಿಗಳ ಅಂಚನ್ನು ಅಲಂಕರಿಸಿತ್ತು. ನೀಳವಾದ ಕತ್ತಿನಲ್ಲಿ, ಒಂದು ಸಣ್ಣ ಹರಳುಗಳ ಪಚ್ಚೆಯ ಸರ. ಆ ದಿನ ಆ ಕ್ಷಣದಲ್ಲಿ ಇನ್ನಾವ ಹರಳಿನ ಸರವೂ ಒಪ್ಪಲಾಗದಷ್ಟು ಚೆನ್ನಾಗಿ ಒಪ್ಪುತ್ತಿತ್ತು. ಆ ನೀಳ ಕತ್ತನ್ನು ಬಳಸಿದ್ದ ಆ ಹಸಿರು ಮಣಿಗಳ ಮಾಲೆ. ಆಕೆ ಕಪ್ಪು ಬಣ್ಣದ ಸ್ಕರ್ಟ್ ಧರಿಸಿದ್ದಳು. ಯಾವುದೋ ಪುಸ್ತಕವನ್ನು ಹಿಡಿದಿದ್ದ ಅವಳ ಕೈ ಬೆರಳುಗಳು ತೀರಾ ನೀಳವಾಗಿದ್ದು, ಅತ್ಯಂತ ಕಲಾತ್ಮಕವಾಗಿ ಕಾಣುತ್ತಿದ್ದವು.

ನಾನು ಇಷ್ಟೆಲ್ಲಾ ವಿವರವಾಗಿ ವರ್ಣಿಸೋದನ್ನ ಕೇಳಿದ್ರೆ, ಅವಳು ನನ್ನ ಮೇಲೆ ಎಂತಹ ಪ್ರಭಾವ ಬೀರಿದ್ಲು ಅನ್ನೋದನ್ನ ನೀನು ಊಹಿಸಿರಬಹುದು. ನಾನು ಸಮಯ ಸಿಕ್ಕಾಗಲೆಲ್ಲಾ ಅವಳನ್ನ ನೋಡುತ್ತಾ ಆನಂದ ಅನುಭವಿಸ್ತಾ ಕೂತಿದ್ದೆ. ಟ್ರೈನ್ ಪ್ರತಿಬಾರಿ ಯಾವುದಾದರೂ ಸ್ಟೇಷನ್ನಿನಲ್ಲಿ ನಿಂತಾಗಲೆಲ್ಲಾ ನನಗೆ ವಿಪರೀತ ಗಾಭರಿ. ಈ ಸ್ಟೇಷನ್ನಿನಲ್ಲೇ ಇಳಿದುಬಿಡ್ತಾಳೇನೋ ಅಂತ. ಪುನಃ ಟ್ರೈನ್ ಹೊರಟ ಮೇಲೆ ನನಗೆ ಸಮಾಧಾನ. ಹೀಗೆ ಸಾಗಿತ್ತು ನಮ್ಮ ಯಾತ್ರೆ.

ಆಗಿಂದಾಗ್ಗೆ ಅವಳೂ ನನ್ನ ಕಡೆ ನೋಡೋಳು. ಹಾಗೆ ಒಮ್ಮೆ ನಮ್ಮ ಕಣ್ಣುಗಳು ಸಂಧಿಸಿದಾಗ ನಾನು ಮೆಲುನಗೆ ನಕ್ಕೆ. ಅವಳಿಂದ ಅದಕ್ಕೆ ಏನೂ ಪ್ರತಿಕ್ರಿಯೆ ಇರಲಿಲ್ಲ. ನನ್ನ ಬಗ್ಗೆ ಅವಳು ತೋರಿಸುತ್ತಿದ್ದ ಉದಾಸೀನ, ಬರೀ ತೋರಿಕೆಯದಿರಬೇಕೆಂದು ನನಗೆ ಅನ್ನಿಸಿತ್ತು.

ಮಗೂ, ನೀನೇನಾದ್ರೂ ನನ್ನನ್ನೇ ಹೋತುಕೊಂಡಿದ್ರೆ, ದಿನಕ್ಕೆ ಇಪ್ಪತ್ತು ಬಾರಿಯದ್ರೂ ಪ್ರೇಮದ ಬಲೆಗೆ ಬಿದ್ದೇ ಬೀಳ್ತೀಯಾ. ಆದ್ರೆ ಈ ಪ್ರೇಮ ಪ್ರಸಂಗಗಳೆಲ್ಲಾ ಕೇವಲ chance encounters ಅಷ್ಟೇ. ಅಂಗಡೀ ಬೀದಿಯಲ್ಲೋ, ರೆಸ್ಟೊರಾವಲ್ಲೋ ಕ್ಷಣ ಕಾಲ ನಮ್ಮ ಕಣ್ಣಿಗೆ ಬಿದ್ದು ಮರೆಯಾಗೋ ಈ ತಾರೆಯರ ಮೇಲಿನ ಮೋಹ ಕೇವಲ ಕ್ಷಣಿಕ ಅನ್ನೋದು ನಮಗೂ ಅರಿವಿರುತ್ತೆ. ಅದಕ್ಕೇ ಪುನಃ ಪುನಃ ಈ ಬಲೆಗೆ ಬೀಳಲು ಸಜ್ಜಾಗ್ತಾನೇ ಇರ್ತೀವಿ. ಈ ಸುರಂಗದ ಅಪ್ಸರೇ ಕೂಡ ಅಷ್ಟೇ. ಟ್ರೈನ್ ನಿಂತು, ಅವಳು ಎದ್ದು ಹೋಗೋ ಹೊತ್ತಿಗೆ ಅವಳ ಋಣ ತೀರುತ್ತೆ ಅಂತ ನನಗೆ ಖಾತ್ರಿ ಇತ್ತು. ಟ್ರೈನ್

ನಿಲ್ದೋದನ್ನೇ ಹತಾಶ ಭಾವನೆಯಿಂದ ಕಾಯ್ತಾ ಇದ್ದೆ.

ಏರ್‌ಪೋರ್ಟ್ ಸ್ಟೇಷನ್ನಿನಲ್ಲಿ ಟ್ರೈನ್ ನಿಂತಿತು - ಆ ತರುಣಿ ಎದ್ದು ನಿಂತಳು. ಸಾಧಾರಣ ಎತ್ತರ. ತೆಳ್ಳಗಿದ್ದುದರಿಂದ ತೀರಾ ಎತ್ತರವೇನೋ ಅನ್ನೋ ಹಾಗಿದ್ದಳು ಅಷ್ಟೇ. ಪಕ್ಕದಲ್ಲಿದ್ದ ಮಣಭಾರ ಸೂಟ್‌ಕೇಸ್‌ನ ಹಾಗೂ ಹೀಗೂ ಎಳೆದು, ಧಡಕ್ಕನೆ ಪ್ಲಾಟ್‌ಫಾರಂ ಮೇಲೆ ಹಾಕಿದಳು, ಆ ತರುಣಿ. ಆಮೇಲೆ, ಸೂಟ್‌ಕೇಸ್ ಸಾಗಿಸೋಕ್ಕೆ ಯಾವ್ದಾದ್ರೂ ಟ್ರಾಲಿ ಸಿಗುತ್ತೇನೋ ಅಂತ ಅವಳು ಅಚೀಚೆ ಕಣ್ಣಾಡಿಸ್ತಾ ಇದ್ದಾಗ, ನಾನು ಅವಳ ಬಳಿ ಹೋಗಿ, ಮೆಲ್ಲನೆ ಅವಳ ಭುಜ ತಟ್ಟಿ,

''ನಾನು ಸಹಾಯ ಮಾಡಬಹುದೇ?'' ಅಂತ ಕೇಳಿದೆ.

ಅವಳು ನನ್ನ ಕಡೆ ತಿರುಗಿದಳು. ''ಓಹ್! ನೀವಾ?'' ಅಂದಳು.

ನಾನು ಸುಮ್ಮನೆ ನಕ್ಕು ಅವಳ ಸೂಟ್‌ಕೇಸ್‌ನ ಕೈಗೆ ತೆಗೆದುಕೊಂಡೆ.

''ನಿಮ್ಮ ಹ್ಯಾಂಡ್‌ಬ್ಯಾಗ್‌ನಾದ್ರೂ ನನಗೆ ಕೊಡಿ'' ಅಂಥ ಹೇಳ್ತಾ ಅವಳು ನನ್ನ ಬ್ಯಾಗ್‌ನ ನನ್ನಿಂದ ಕಸಿದುಕೊಂಡಳು. ಇಬ್ಬರೂ ಎಸ್ಕಲೇಟರ್ ಕಡೆಗೆ ನಡೆದೆವು.

''ಅಬ್ಬಾ! ಏನು ಹೆಣ ಭಾರಾ ರೀ ನಿಮ್ಮ ಸೂಟ್‌ಕೇಸ್! ಹೆಣ ಗಿಣ ಇಲ್ಲ ತಾನೇ!'' ಅಂತ ಕೇಳಿದೆ.

''ಇಲ್ಲ, ಪುಸ್ತಕಗಳು. ಅದಿರ್ಲಿ, ಟ್ರೈನ್‌ನಲ್ಲಿ ಪ್ರಯಾಣ ಮಾಡ್ತಿರೋ ಹೆಣ್ಣುಮಕ್ಕಳನ್ನ ದುರುಗುಟ್ಟುಕೊಂಡು ನೋಡ್ಬಾರ್ದು ಅಂತ ಯಾರೂ ನಿಮಗೆ ಕಲಿಸಿಕೊಟ್ಟಿಲ್ವೇ?'' ಅಂತ ಅವಳು ನನ್ನ ಕೇಳಿದ್ಲು.

''ನೋಡಿದ್ರೆ ಏನೂ ತಪ್ಪಿಲ್ಲ. ನೋಡಿದ್ದು ಆ ತರುಣೀಗೆ ಗೊತ್ತಾಗಬಾರದು ಅಷ್ಟೇ. ಆದ್ರೂ ನಿಮಗೆ ಗೊತ್ತಾಗೋ ಹಾಗೆ ನೋಡಿದ್ದಕ್ಕೆ ಕ್ಷಮಾಪಣೆ ಕೇಳ್ತೀನಿ'' ಅಂದೆ

''ಒಬ್ಬ ಗಂಡಸು, ಒಬ್ಬ ಹೆಂಗಸನ್ನ ದುರುಗುಟ್ಟಿಕೊಂಡು ನೋಡಿದ್ರೆ, ಅದೂ ಒಂದು ರೀತಿ ದಬ್ಬಾಳಿಕೇನೆ'' ದೂರಿಗಿಂತ, ಸಂಭಾಷಣೆಯನ್ನು ಮುಂದುವರಿಸುವ ಯತ್ನದಂತೆ ಕಂಡಿತು ಆಕೆಯ ಉದ್ಗಾರ.

ನಾನು ಸುಮ್ಮನೆ ಬಿಡಲಿಲ್ಲ

''ಒಬ್ಬ ಹೆಂಗಸು, ಒಬ್ಬ ಗಂಡಸನ್ನ ದೃಷ್ಟಿಸಿ ನೋಡಿದರೆ, ಅದು ಪರವಾಗಿಲ್ಲವೋ? ನೀವು ಕಿಟಕಿ ಪಕ್ಕದ ಗಾಜಿನ ಪಾರ್ಟಿಷನ್‌ಗೆ ಒರಗಿದಂತೆ ನಟಿಸಿ, ಗಾಜಿನಲ್ಲಿ ಬಿದ್ದ ನನ್ನ ಪ್ರತಿಬಿಂಬಾನ ಕೂಲಂಕುಷವಾಗಿ ಪರೀಕ್ಷಿಸುತ್ತಾ ಬಂದಿದ್ದನ್ನು ನಾನು ನೋಡ್ಲಿಲ್ಲಾ ಅಂದ್ಕೊಂಡಿದೀರಾ?''


''ನಾನೇನೂ ಹಾಗೆ ಮಾಡ್ಲಿಲ್ವಲ್ಲಾ'' ಮೆಲು ದನಿಯಲ್ಲಿ ಆಕೆ ಹೇಳಿದಾಗ ಕಣ್ಣಿನ್ನು ಕೆಳಗೆ ಹಾಯಿಸಿದಳು. ಆಮೇಲೆ ತನ್ನ ಸುಳ್ಳಿಗೆ ತಾನೇ ನಾಚಿ ''ಬಹಳ ಸೂಕ್ಷ್ಮ ನೀವು. ನಿಮಗೆ ಗೊತ್ತಾಗತ್ತೆ ಅಂದ್ಕೊಂಡಿರ್ಲಿಲ್ಲ. ಈಗ ನನ್ನ ಸರದಿ ಕ್ಷಮೆ ಕೇಳೋಕ್ಕೆ'' ಮೆಲುನಗೆ ಬೀರುತ್ತಾ ಅವಳು ಹೇಳಿದಳು.

ಇಬ್ಬರೂ ಎಸ್ಕಲೇಟರ್ ಹತ್ತಿ ಏರ್‌ಪೋರ್ಟ್‌ನ ಲೌಂಜ್ ಸೇರಿದ್ದೆವು. ಅವಳು ಯಾವ ಫ್ಲೈಟ್‌ಗೆ ಹೊರಟಿದ್ದಾಳೆಂದು ನನಗೆ ಗೊತ್ತಿರಲಿಲ್ಲ. ನನ್ನ ಫ್ಲೈಟ್‌ಗೆ ಇನ್ನೂ ಒಂದು ಘಂಟೆ ಸಮಯ ಇತ್ತು.

''ಇಲ್ಲೇ ಕಾಫಿ ಷಾಪ್ ಇದೆ. ನನ್ನ ಜೊತೆ ಒಂದು ಕಾಫಿಗೆ ಸಮಯ ಇದೆಯೇ?'' ಅಂತ ನಾನು ಆಹ್ವಾನಿಸಿದೆ.

ಕಾಫಿ ಕುಡಿಯುತ್ತಿದ್ದಾಗ, ಇದ್ದಕ್ಕಿದ್ದಂತೆ ನನಗೆ ಹುಚ್ಚು ಧೈರ್ಯ ಬಂತು. ನಾನು ಮಾತನಾಡಲು ಪ್ರಾರಂಭಿಸಿದೆ.

''ನೋಡಿ, ತರುಣೀರನ್ನ ನೋಡೋದು, ನನಗೆ ಹುಟ್ಟಿನಿಂದ ಬಂದ ಚಾಳಿ. ಬಸ್ಸಿನಲ್ಲಿ, ಬೀದೀಲಿ, ರೆಸ್ಟೊರಾದಲ್ಲಿ, ಆಫೀಸಿನಲ್ಲಿ, ಎಲ್ಲೇ ಆಗಲಿ, ನನಗೆ ಛಾನ್ಸ್ ಸಿಕ್ಕಿದ್ರೆ ನಾನು ಆಕರ್ಷಕ ತರುಣಿರನ್ನ ನೋಡದೇ ಬಿಡೋದಿಲ್ಲ. ಆದರೆ, ಹಾಗೆ ಕಣ್ಣಿಗೆ ಬಿದ್ದ ಮಹಿಳೆಯರಲ್ಲಿ ಕೆಲವೇ ಕೆಲವರು, ನಿಜವಾಗ್ಲೂ ಮನಸ್ಸಿನ ಕ್ರಿಯೆಗಳನ್ನೆಲ್ಲಾ ಸ್ತಬ್ಧ ಆಗೋ ಹಾಗೆ ಮಾಡಿಬಿಡ್ತಾರೆ. ನೋಟಕನ ಹೃದಯಾನ ತಮ್ಮ ಕಣ್ಣಿನ ದೃಷ್ಟಿಯಿಂದಲೇ ಹಿಡಿದು ಜಗ್ಗಿ ಬಿಡ್ತಾರೆ. ಸ್ಥಬ್ಧವಾಗಿರೋ ಕೊಳಗಳಂತಹ ಆಳ ಕಾಣದ ಕಣ್ಣುಗಳೋ, ಆಜೀವ ಪರ್ಯಂತ ಚುಂಬಿಸ್ತಾನೆ ಇರ್ಬೇಕು ಅನ್ನಿಸೋ ತುಟಿಗಳೋ, ಅಥವಾ ಬಣ್ಣಿಸಲಾಗದ ಇನ್ನಾವುದೋ ಒಂದು ಗುಣ, ನಮ್ಮನ್ನ ಆ ತರುಣೀಗೆ ಆಕರ್ಷಿಸಿ ಬಿಡುತ್ತೆ. ನೀವು ಆ ಗುಂಪಿಗೆ ಸೇರ್ತೀರಿ.'' ಹೀಗೆ ಏನೇನೋ ಬಡಬಡಿಸಿದೆ. ಅವಳು ನನ್ನ




ಪ್ರಲಾಪಾನೆಲ್ಲಾ ಸಾವಧಾನವಾಗಿ ಕೇಳಿಸ್ಕೊಂಡ್ಲು.

"Either you are a shameless flatterer or you're very sweet" ಅಂದಳು ಆ ತರುಣಿ.

''ಯಾವ ಗಂಡಸೂ, very sweet ಅಂತ ಅನ್ನಿಸ್ಕೊಳ್ಳೋಕ್ಕೆ ಇಷ್ಟ ಪಡೋದಿಲ್ಲ'' ಅಂದೆ. ಆ ಕ್ಷಣದಲ್ಲಿ ನನಗೆ ಹೇಳಲು ಇನ್ನೇನೂ ತೋಚಲಿಲ್ಲ.

ಕಾಫಿ ಬಿಲ್ ಬಂತು, ನಾನೇ ಬಿಲ್ ಕೊಟ್ಟೆ. ಇಬ್ಬರೂ ಎದ್ದು ನಿಂತೆವು. ಆಕೆ ಮಾತನಾಡಲು ಪ್ರಾರಂಭಿಸಿದಳು ''ನಾನು ಏಕೆ ಹೀಗೆ ಮಾಡ್ತಿದೀನಿ ಅಂತ ನನಗೇ ತಿಳೀದು. ಆದ್ರೂ ಮಾಡ್ತಿದೀನಿ. ಇಗೋ ನನ್ನ ಅಡ್ರೆಸ್ ಇರೋ ಕಾರ್ಡ್. ಎರಡು ವಾರ ನಾನು ಊರಿನಲ್ಲಿ ಇರೋದಿಲ್ಲ. ನಾನು ಊರಿಗೆ ಹಿಂತಿರುಗಿದ ಮೇಲೆ, ನೀವು ನನಗೆ ಪುಷ್ಪಗುಚ್ಛ ಕಳಿಸಬಹುದು. ನಮ್ಮಿಬ್ಬರ ಮಧ್ಯೆ ಸ್ನೇಹ ಬೆಳೆಯೋ ಸಾಧ್ಯತೆ ಇದೆಯಾ ಅಂತ ನೋಡೋಣ. ನೀವೇನಾದ್ರೂ ತಲೆಹರಟೆ ಜಾತಿ ಆದ್ರೆ ನಿಮಗೆ ಒಂದು ಎಚ್ಚರಿಕೆ. ನನಗೆ ಇಬ್ಬರು ಅಣ್ಣಂದಿರಿದ್ದಾರೆ. ಇಬ್ಬರೂ ಧಡೂತಿ ಆಸಾಮಿಗಳು. ನನ್ನ ಕಂಡ್ರೆ ಅವ್ರಿಬ್ಬರಿಗೂ ಪಂಚಪ್ರಾಣ'' ಹೀಗಂತ ಹೇಳಿ ಬೈ ಅಂತ ಕೂಡ ಹೇಳ್ದೆ ಆ ತರುಣಿ ಚೆಕ್ ಇನ್ ಕೌಂಟರ್ ಕಡೆಗೆ ನಡೆದುಬಿಟ್ಟಳು. ನಾನು ನನ್ನ ಫ್ಲೈಟ್ ಹಿಡಿಯಲು ಹೊರಟೆ.

★★★★



ಎರಡು ದಿನಗಳ ನಂತರ ನಾನು ಊರಿಗೆ ಹಿಂತಿರುಗಿದೆ. ಊರಿಗೆ ಬಂದ ಮೇಲೆ ಮೊದಲನೇ ಕೆಲಸ ಅಂದ್ರೆ, ಆ ತರುಣಿ ಕೊಟ್ಟ ಅಡ್ರೆಸ್‌ನ ಹುಡುಕೋದು. ಅವಳು ಊರಿನಲ್ಲಿ ಇರೊಲ್ಲ ಅಂತ ಹೇಳಿದ್ದು ಒಳ್ಳೇದೇ ಆಯಿತು. ಒಬ್ಬರು ವಾಸ ಮಾಡೋ ಮನೆ, ಅದರ ಪರಿಸರ ಇದನ್ನೆಲ್ಲಾ ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ರೆ ಆ ವ್ಯಕ್ತಿ ಬಗ್ಗೆ ಸುಮಾರು ಮಾಹಿತಿ ಪಡೀಬಹುದು.

ತುಂಬಾ ಹುಡುಕಿದ ಮೇಲೆ ಮನೆ ಸಿಕ್ಕಿತು. ಅದೊಂದು ಮಾರಾಟಕ್ಕಿದ್ದ ಮನೆ. ಆಗತಾನೇ ಮಾರಾಟವಾಗಿದೆ ಅಂತ ಬೋರ್ಡ್ ಹಾಕಿತ್ತು. ಅವಳು ಅದೇ ತಾನೇ ಮನೆಯನ್ನು ಕೊಂಡು, ಊರಿಗೆ ಬಂದ ಮೇಲೆ ಅಲ್ಲಿ ವಾಸ ಮಾಡುವ ಹಂಚಿಕೆ ಇದ್ದಂತಿತ್ತು. ಮನೆಯ ಹೊರಗೆ ಅಡ್ಡಾದಿಡ್ಡಿ ಬೆಳೆದಿದ್ದ ಹುಲ್ಲು, ಜೊಂಡು, ಗಿಡ ಗಂಟೆ, ಸೊಪ್ಪು ಸದೆ, ಹುಚ್ಚು ಹುಚ್ಚಾಗಿ ಹರಡಿಕೊಂಡಿತ್ತು. ಮನೆಯ ಹಿಂದಿನ ಮಾಲೀಕರಿಗೆ 'ತೋಟ' ಎಂಬ ಶಬ್ದದ ಅರ್ಥವೂ ಸಹ ತಿಳಿಯದೇನೋ ಅನ್ನುವ ಹಾಗಿತ್ತು ಆ ಪರಿಸರ.

''ಪುಷ್ಪಗುಚ್ಛ ಗಳಿಸಬಹುದು'' ಆ ತರುಣಿಯ ಮಾತು ನನ್ನ ಕಿವಿಯಲ್ಲಿ ಇನ್ನೂ ಗುಣಗುಣಿಸುತ್ತಿತ್ತು.

★★★★

ಅವಳು ಊರಿಗೆ ಹಿಂತಿರುಗಿ ಬಂದಾಗ, ಅವಳ ಮನೆಯ ಮುಂದೆ ಒಂದು ಸುಂದರ ಹೂದೋಟ ಕಂಗೊಳಿಸುತ್ತಿತ್ತು. ಆಗತಾನೇ ಮಟ್ಟಸವಾಗಿ ಕತ್ತರಿಸಿ ಒಪ್ಪಮಾಡಿದ ಹುಲ್ಲುಹಾಸು, ಬಣ್ಣ ಬಣ್ಣದ ಹೂವಿನ ಪಾತಿಗಳು, ಕಿಟಕಿಗಳಿಂದ ತೂಗುಬಿಟ್ಟ ಪುಷ್ಪ ಕುಂಡಗಳು, ತೋಟಗಾರಿಕೆ ಸ್ಪರ್ಧೆಯ ತೀರ್ಪುಗಾರರನ್ನು ನಿರೀಕ್ಷಿಸುತ್ತಿದ್ದಂತಿತ್ತು ಆ ಹೂದೋಟ.

ಅವಳು ನನಗೆ ಫೋನ್ ಮಾಡಿದಾಗ ಮೊದಲು ಹೇಳಿದ ಮಾತು: ''ಸಧ್ಯ ಗಾರ್ಡನರ್ ನೇಮಿಸೋ ಖರ್ಚು ಇಲ್ವಲ್ಲ''

★★★★

ಇದೆಲ್ಲಾ ಯಾಕೆ ಹೇಳುಕ್ಕೆ ಶುರು ಮಾಡಿದೆ ಅನ್ನೋದೇ ಮರೆತು ಹೋಯ್ತಲ್ಲ ಮಗು. ಹೆಂಗಸರ ವಿಷಯ ಹೇಳುಕ್ಕೆ ಹೊರಟಿದ್ದೆ ಅಂತ ಕಾಣುತ್ತೆ ಅಲ್ವೇ. ಇಲ್ಲ, ಇಲ್ಲ. ಈಗ ನೆನಪಿಗೆ ಬಂತು. ಯಾವುದೋ ಸಾಮಾನ್ಯವಾದ ಹೆಂಗಸು ನಿನ್ನ ಕಣ್ಣಿಗೆ ಹೇಗೆ ದೇವಲೋಕದ ಅಪ್ಸರೆಯಾಗಿ ಕಾಣಿಸೋದು ಸಾಧ್ಯ ಅನ್ನೋದನ್ನ ವಿವರಿಸ್ತಾ ಇದ್ದೆ ಅಲ್ವೇ ಮಗು. ''ಈಗೆಲ್ಲಿದ್ದಾಳೆ ಆ ತೋಟದ ಅಪ್ಸರೆ?'' ಅಂತ ಕೇಳಿದ್ಯಾ? ನನಗೇನು ಗೊತ್ತು? ಬಹುಶಃ ಅಡಿಗೆ ಮನೆಯಲ್ಲಿ ಕಾಫಿ ಮಾಡ್ತಾ ಇರಬಹುದು. ಹೋಗಿ ನೋಡು. ಇದ್ರೆ, ಅಪ್ಪಂಗೂ ಒಂದು ಲೋಟ ಕಾಫಿ ಬೇಕಂತೆ ಅಂತ ಹೇಳು.

ನೀನ್ಯಾರು, ಅವರ್ಯಾರು?

ಶಿವರಾಮ ಕಾರಂತ

ಆರು ಹಿತವರು ನಿನಗೆ ನಾಲ್ಕು ಸುತ್ತಲಲಿ
ದಾನವರೊ ಮಾನವರೊ! ಸುತ್ತು ಮುತ್ತಿನಲಿ?
ಕೇಳಲಿಕೆ ಉಂಟು ಕಾರಣ ಎಂದು-
ಪ್ರಶ್ನೆಗಿಲ್ಲವು ನೋಡು - ಹಿಂದು, ಮುಂದು!
ಸ್ವಾತಂತ್ರ್ಯ ಎಂಬುದನು ಗಾಂಧಿ ಬರಿಸಿದನಂತೆ-
ನಾಲ್ಕೈದು ದಶಕಗಳ ಹಿಂದೆ - ಆದುದೇನಂತೆ?
ತಾನ್ ನಿಜವೊ, ಸಟೆಯೋ ತಿಳಿಯದಂತೆ!
ಭಾರತೀಯ ಇಹೆ ನೀನು ಯಾಕೆ ಸಂದೇಹ?
ಎದೆತಟ್ಟಿ ಹೇಳಯ್ಯ - 'ಅಲ್ಲ ಕೇರಳದತೀಯ!'
ಬಂದಿಹುದು ಸ್ವಾತಂತ್ರ್ಯ - ಹಕ್ಕಿನಿಂ ತಾನೇ!
ಆ ಮೊದಲು ಏನಿತ್ತು - ಏನಾಯ್ತು ಗೊತ್ತೇ?
ಜಗದ ಪುಂಡರ ಹಿಂಡು ನಮ್ಮ ಆಳಲಿಲ್ಲ?
ನಮ್ಮ ನೆಲೆ ನಾವರಿಯದ ಹೊತ್ತಿನಲ್ಲಿ-
ಬಂದವರು - ಕೊಂದವರು - ನೆತ್ತರನು ಸುರಿದವರು!
ದಾಂಡಿಗರು, ದುರ್ಜನರು, ರಕ್ಕಸರ ಬಳಗದರು
ಬಂದು ಹೊಕ್ಕರು ದೇಶ-ನಾವ್ ನಿದ್ರಿಸಿದ ಗಳಿಗೆ
ಥಕ್ಕು ಥೌಳಿಗಳಿಂದ ಎಲ್ಲರನು ಆಳಿದರು!
ಅನುಮತಿಯ ಕೇಳದೆಲೆ - ದಾಸತ್ವ ಹೊರಿಸಿದರು
ನಾವು ಕರೆದವರಲ್ಲ 'ಬನ್ನಿ' ಎಂದವರಲ್ಲ
ಹೀಗಿರಲು - ಗಾಂಧಿ ಎಂಬವ ಬಂದ!
ದುಷ್ಟ ದಿಟ್ಟರ ಮುಂದೆ - ನಿಂದೇನಿಂದ
ದೇಶಕ್ಕೆ ದೇಶವೇ - ಗಾಂಧೀಜೀ ಜೈ ಅನ್ನೆ!

ಹೆದರಿ ಕಂಗಾಲಾಗಿ ಮಡಚಿದರು ಬಾಲ
ಮಡಚುವ ಮುಂಚೆ - ನಿಮ್ಮದೇನಿದೊ ನಿಮಗೆ
ನಮಗೊಂದೂ ಬೇಡ! ಅತ್ತತ್ತು ಬೇಸತ್ತು ಹೋಗೆ
ಇದುನೋಡಿ ಪೂರ್ವಕಥೆ! ಜೈಲುಗಳು ತುಂಬಿದುವು
ನಮ್ಮನಾಳುವ ಕಷ್ಟ - ಬೇಡೆಂದು ತೊಲಗಿದರು
ಬಿಳಿ ಮೊಗದ ಶೋಷಕರು - ದೂಷಿತರು
ಅಂತಿಂತು ಭಾರತದ ಕುಂತಿ ಮಕ್ಕಳ ಕಷ್ಟ
ತನ್ನಂತೆ ಕಳಚಿತ್ತೊ ಕೌರವರ ಕುಲನಾಶವಾಗೆ
ಭಾರತವು ಸ್ವತಂತ್ರವಾಯಿತ್ತೈ - ಒಂದುದಿನ....
'ಆ ನಮ್ಮ' 'ಆ ನಿಮ್ಮ' ಗಾಂಧಿ ಕಣ್ಮರೆಯಾಗೆ-
ಪರರ ತಂತ್ರದ ಬೇಳೆ ಬೇಯದಾಯ್ತು!

ಬಂತೈಯ್ಯ ಸ್ವರ್ಣಯುಗ ಬಾನಿನಿಂದಲೇ ಭುವಿಗೆ
ಆಳಿದರ ಕಾಲವು ಸರಿದು, ಆಳುವಾಗಳಿಗೆ ಬರೆ-
ಆಚೀಚೆನರ ಸರಿಸಿ, ಮೆರೆದರ್ರೈ 'ಗಾಂಧಿಗಳು'
ಮಂತ್ರತಂತ್ರದ ಯುಗದಿ - ಓಂಕಾರ ಮೆರೆದಂತೆ
ಗಾಂಧಿ ನಾಮವು ಮುಂದೆ ನೂರು ನಾಮವ ಮೀರೆ,
ಪಾರರ್ಸಿ ಗಾಂಧಿಯವ - ಮೆರೆಸಿದನು/ನಾಮವನು
'ನಾಮವೊಂದೇ ಸಾಲದೇ - ದೇಶವನಾಳೆ-'
ಎಂಬ ತತ್ವವೆ ಮೆರೆದು, ಜನತೆ ಭೋಳೆ-
ಭರವಸೆಯ ಕೈತೋರಿ - ಕೈಕೊಟ್ಟ ಜನರೆಷ್ಟು!
ತೆರತೆರನ ತಂತ್ರದಿಂದ ಕುತಂತ್ರರಾಗಿ
ಆಳುವಾ ಜನನಾವು - ಎದ್ದೇಳುವಾ ಜನರು!

ಕನ್ನಡದ ಕನವರಿಕೆ

ತುರುವೇಕೆರೆ ಪ್ರಸಾದ್

ವರುಷಗಳ ಹಿಂದೆ ಡಿಸೆಂಬರ್‌ನಲ್ಲೆಂದೋ ನಾನು ಮಲಗಿದ್ದ ನೆನಪು. ಎಲ್ಲರಂತೆ. ಯಾರೋ ಜೋಗುಳ ಹಾಡುತ್ತಿದ್ದರು. 'ಬಣ್ಣದ ತಗಡಿನ ತುತ್ತೂರಿ' ಧಾಟಿಯಲ್ಲಿ ಕನ್ನಡದ ಕಸ್ತೂರಿ ಊದುತ್ತಿದ್ದರು. ಒಬ್ಬರಾದ ಮೇಲೆ ಒಬ್ಬರಂತೆ ಸರದಿಯಲ್ಲಿ ತೆಲುಗು, ತಮಿಳು, ಮಲೆಯಾಳಿಯಲ್ಲಿ ಲಾಲಿ ಹಾಡುತ್ತಿದ್ದರು.

''ಕನ್ನಡಕೆ ಹೋರಾಡು...

ಕನ್ನಡವ ಕಾಪಾಡು

ಜೋಗುಳದ ಅರಕೆಯಿದು...

ಅಷ್ಟೇ ನೆನಪು ಮತ್ತೆ ಗಾಢ ನಿದ್ರೆ. ಆಗೊಮ್ಮೆ, ಈಗೊಮ್ಮೆ ಎಚ್ಚರವಾಗುತ್ತಿತ್ತು. 'ಕನ್ನಡ ಉಳಿಸಿ, ಉಳಿಸಿ' ಎಂದು ಪಕ್ಕದವರು ಗಟ್ಟಿಯಾಗಿ ಕನವರಿಸಿ ಮಗ್ಗಲು ಬದಲಾಯಿಸಿ ಮಲಗುತ್ತಿದ್ದರು. 'ಗೊರ್, ಗೊರ್' ಎಂದು ಗೊರಕೆ ತೆಗೆಯುತ್ತಿದ್ದರು. ಎಲ್ಲಾ ಮಂಪರು, ಮಂಪರು, ಅರೆನಿದ್ರೆ ತುದಿಯಲ್ಲಿ (ಗಡಿ ಎನ್ನಬಹುದೇನೋ!) ಮಲಗಿದ್ದರಾಯರಿಗೋ ಪಾಪ; ಇರುಸು ಮುರುಸಿರಬೇಕು. ಜೋಗುಳಕ್ಕೂ ನಿದ್ದೆ ಬಂದಿರಲಿಲ್ಲ. ಆಕಡೆ, ಈಕಡೆಯವರು ಒತ್ತಿ ಕಂಜೆಶನ್, ಉಸಿರಾಟದ ತೊಂದರೆ, ಕಸ್ತೂರಿ ಮಾತ್ರೆ ನುಂಗಿ 'ಜೈ ಭುವನೇಶ್ವರಿ, ಕಾಪಾಡು' ಎಂದು ಕಾಪಾಡಬೇಕಾದವರನ್ನು ಇವರೇ ಪ್ರಾರ್ಥಿಸಿ ನರಳಿದರು.

ಮತ್ತೆ ಗಾಢ ನಿದ್ರೆ. ಇದ್ದಕ್ಕಿದ್ದಂತೆ ಬೆಚ್ಚಿ ಬಿದ್ದೆ. ಎಂತಹ ಕನಸು; ಕರ್ನಾಟಕದ ಎಲ್ಲಾ ಚಿಲ್ಲರೆ - ಸಗಟು ಲೇಖಕರ ಪುಸ್ತಕಗಳನ್ನೆಲ್ಲಾ ಯಾರೋ ಖರೀದಿಸುತ್ತಿದ್ದಾರೆ. ಎಂತಹ ಅಭಿಮಾನ; ಯಾವುದೇ ಪುಸ್ತಕದ ಒಂದು ಪ್ರತಿಯೂ ರೆಫರೆನ್ಸಿಗೆ ಸಹ ಸಿಗುತ್ತಿಲ್ಲ. ಮನೆ ಮನೆಗೆ ಬಂದು ಕನ್ನಡ ಪುಸ್ತಕ ಕೇಳಿ ಕೇಳಿ ಕೊಂಡು ಹೋಗುತ್ತಿದ್ದಾರೆ. ಹರಿದ ರದ್ದಿ ಪುಸ್ತಕಗಳಿಗೂ ಪೂರ್ಣ ಬೆಲೆ. ಮತ್ತೆ ಈ ನಾಡಿನಲ್ಲಿ ಒಂದು ಕನ್ನಡ ಪುಸ್ತಕವೂ ಸಿಗದಂತೆ ಯಾರೋ ಸಾರಾಸಗಟಾಗಿ ಕೊಳ್ಳುತ್ತಿದ್ದಾರೆ. ಯಾಕೋ ಭಯವೆನಿಸಿ ಗಾಬರಿಯಾಗಿ ಬೆಚ್ಚಿ ಎದ್ದಿದ್ದೆ. ಹಾಗೇ ಕತ್ತಲಲ್ಲಿ ಕಣ್ ಹಾಯಿಸಿದೆ. 'ಸೋಮರಸ' ಕುಡಿದವರಂತೆ ಭಾರೀ ನಿದ್ರೆಯಲ್ಲಿದ್ದಾರೆ ಮಂದಿ. ಈ ಕುರಿಮಂದೆಯಲ್ಲಿ ಅಸ್ಪಷ್ಟವಾಗಿ ಯಾರೋ ಗೊಣಗುತ್ತಿದ್ದಾರೆ.

''ಕನ್ನಡ ಕನ್ನಡ ಕನ್ನಡ

ಇದು ಎನ್ನಡ?

ನಿಮ್ಮದು ತುಂಬಿದ ಕೊಡ

ನಮ್ಮದು ಕಾಲಿ ಕೊಡ

ಕೈತುಂಬ ಕಡ;
ನಡುನೀರಿನಲ್ಲಿ ಕನ್ನಡ;
ಕನ್ನಡಿಗರಿಗಿಲ್ಲ ಅನ್ನ
ಕನ್ನಡಿಗರ ಹೃದಯಕ್ಕೆ ಕನ್ನ.''

ತಲೆ ಮತ್ತು ಜೋಲಿ ಹೊಡೆಯಿತು. ಥೆ; ಎಂತಹ ಹಾಳು ನಿದ್ರೆ! ಮತ್ತೆ ಹಾಗೆ ಉರುಳಿಕೊಂಡೆ. ಯಾರ್‍ಯಾರೋ ಬಂದರು. ಯಾವುದ್ಯಾವುದೋ ಭಾಷೆಯಲ್ಲಿ ಮಾತಾಡಿಕೊಂಡು ನಕ್ಕರು. ನಮ್ಮ ಹೊದಿಕೆ ಸರಿ ಮಾಡಿದರು. ತಟ್ಟಿ, ಗಾಳಿಹಾಕಿದರು. ಮಿಸುಕಾಡಿ, ಹೊರಳಾಡುತ್ತಿದ್ದವರಿಗೆ ಒಂದೊಂದು ಮತ್ತಿನ ಇಂಜೆಕ್ಷನ್ ಜಡಿದು ಹೋದರು. ಅಬ್ಬಾ; ಎಂತಹ ವಾತ್ಸಲ್ಯ;

ಮತ್ತೆ ಗಾಢ ನಿದ್ರೆ. ಆರ್.ಇ.ಎಮ್-ಎನ್.ಆರ್.ಇ.ಎಮ್. ಸರಣಿಗಳ ನಿದ್ರೆ. ಏನೇನೋ ಕನಸುಗಳು. ಎಲ್ಲಾ ಚಿತ್ರಮಂದಿರಗಳಲ್ಲೂ ಕನ್ನಡ ಚಿತ್ರಗಳ ಪ್ರದರ್ಶನ. ಅಬ್ಬ; ಎಂತಹ ಕ್ರಾಂತಿಕಾರೀ ಬದಲಾವಣೆ. 24 ರೀಲುಗಳು ತೆಲುಗು, ತಮಿಳು, ಹಿಂದಿ ಚಿತ್ರಗಳ ಮಧ್ಯೆ ಒಂದು ರೀಲಿನ ಕನ್ನಡ ಚಿತ್ರದ ಕಡ್ಡಾಯ ಟ್ರೈಲರ್ ಪ್ರದರ್ಶನ. ಸರಕಾರದವರ ಬಿಗಿ ನಿಲುವು. ''ಇಲ್ಲ ಇಲ್ಲ ಸಬ್ಸಿಡಿ - ಬೇಕಾದ್ರೆ ನೀವೇ ಪ್ರಾಣ ಬಿಡಿ,'' ಜನಸಾಮಾನ್ಯರ ಕೊರಗು: ''ನಮಗಿಲ್ಲ ಕಾಸಿನ ಬೇಡಿ, ಕನ್ನಡ ಚಿತ್ರ ಬಂದು (ಹಾಳಾಗಿ) ಹೋಗಲಿ ಬಿಡಿ.''

ಮತ್ತೂ ಒಂದು ಕನಸು. 'ಕನ್ನಡಿಗರಿಗೆಲ್ಲಾ ಕೆಲಸ. ಕೈ ತುಂಬಾ ಕೆಲಸ. ಊಟವನ್ನು ಸರ್ಕಾರವೇ ಕೊಡುತ್ತಿದೆ. ಸಂಬಳವನ್ನು ತಾನೇ ಕೂಡಿಟ್ಟು ಖರ್ಚಿಗೆ ಮಾತ್ರ ಕೊಟ್ಟು ಪ್ರತಿಯೊಬ್ಬನೂ ನಿವೃತ್ತವಾದ ಮೇಲೆ ಅವನ ಕೈಗೇ ಕೊಡತ್ತದೆ. ಆದರೆ ಕಾಂಪೌಂಡ್ ದಾಟಿ ಹೋಗುವಂತಿಲ್ಲ. ಕನ್ನಡ ಚಳುವಳಿ ಮಾಡುವಂತಿಲ್ಲ. ಚಳುವಳಿಗಳೇಕೆ ಇಷ್ಟೆಲ್ಲಾ ಸೌಲಭ್ಯಗಳಿರುವಾಗ?

ಪಕ್ಕದವನು ಮೈ ಮುರಿದ. 'ಯಾಕಣ್ಣ ನಿದ್ದೆ ಬರಲಿಲ್ಲವಾ?' ಅಂದ 'ಏನೇನೋ ಕನಸು' ಅಂದೆ. 'ನನಗೂ ಒಂದು ಕನಸು ಕಣಣ್ಣ' ಅಂತ ಶುರು ಮಾಡಿದ. ' ಎಲ್ಲಾ ರಸ್ತೆಗಳೂ ಕನ್ನಡಮಯ, ಅ.ನ.ಕೃ ರಸ್ತೆ, ಕುವೆಂಪು ರಸ್ತೆ, ರಾಶಿ ರಸ್ತೆ, ಹೀಗೆ. ಆದರೂ ತುಂಬಾ ಬೇಜಾರಾಯ್ತು ಬಿಡಣ್ಣ; ಎಲ್ಲಾ ರಸ್ತೆಗಳಲ್ಲೂ ಹೆಂಡದಂಗಡಿಗಳು, ಚಿಕನ್ ಸೆಂಟರ್ಸ್, ಲೈವ್ ಬ್ಯಾಂಡ್‌ಗಳು, ಒಂಥರಾ ನಾಚಿಕೆಯಾಗಿ ಎಚ್ಚರವಾಯ್ತಣ್ಣ.

'ಸರಿ; ಮಲಕ್ಕೊ; ಬೆಳಗಿನ ಜಾವ. ಈಗ ಯಾವುದಾದರ ಕನಸು ಬಿದ್ದರೆ ನಿಜ ಆಗುತ್ತೆ ಅಂತಾರೆ. ಪ್ರಯತ್ನ ಮಾಡೋಣ' ಎಂದೆ. ಎಲ್ಲೆಲ್ಲೂ ಕನ್ನಡ ಶಾಲೆಗಳು, ಕನ್ನಡದ ಸವಿನುಡಿಗಳು, ಕನ್ನಡಿಗರ ಸಹೃದಯ ನಡವಳಿಕೆ ಇವುಗಳ ಕನಸು ಕಾಣವು ತೊಡಗಿದೆ. ಸಾಧ್ಯವಾಗಲಿಲ್ಲ. ಅವೆಲ್ಲಾ ಕೇವಲ ಅನಿಸಿಕೆಗಳಾಗಿಯೇ ಉಳಿದವು. ಯಾವಾಗ ನಿದ್ದೆ ಹತ್ತಿತ್ತೊ; ಅಂತೂ ಒಂದು ಕನಸು - ಕನ್ನಡ ನಾಡು ವಿಶಾಲವಾದಂತೆ,

ಮೂರ ಮೂರ ಹರಡಿಕೊಂಡಂತೆ; ಜನ ಖುಷಿಯಿಂದ ನೆಲ ನೀರಿನ ದಾಹದಿಂದ ಬೆನ್ನತ್ತಿ ಓಡಿ ಹೋದಂತೆ ಹಿಂದೆ, ಮುಂದೆ, ಅಕ್ಕ-ಪಕ್ಕ ಮಾತಾಡಲು, ಒಡನಾಡಲು ನಮ್ಮವರು ಯಾರೂ ಇಲ್ಲ. ಗಾಬರಿಯಾಗಿ ಎದ್ದೆ. ಮುಖದಲ್ಲಿ ಬೆವರು ಸುರಿಯುತ್ತಿತ್ತು.

ಅರೆ; ಬೆಳಕು ಹರಿಯುತ್ತಿದೆ. ಎಲ್ಲರೂ ಏಳುತ್ತಿದ್ದಾರೆ. ದಯಮಾಡಿ ಮೂಗು ಮುಚ್ಚಿಕೊಳ್ಳಿ. ನವೆಂಬರ್ ಬೆಳಕಿನಲ್ಲಿ ನಾವು ಮತ್ತೆ ಮೈ ಕೊಡವಿದ್ದೇವೆ. ದೂಳಡರಿ ಕಸ್ತೂರಿ ವಾಸನೆ ಮಾಯವಾಗಿ ನೆಗಡಿಯಾಗಿ 'ಅಕ್ಷಿ, ಅಕ್ಷಿ' ಎಂದು ಸೀನಿದರೆ ನಾವು ಜವಾಬ್ದಾರರಲ್ಲ. ಮತ್ತೆ ನಾವು ಮಲಗಿದಾಗ ನೀವು ಸೀನುತ್ತಾ ನಿದ್ದೆಗೆಡಿಸಬೇಡಿ.

ಬೆಲ್ಲದ ರುಚಿ - ಪಂಚೇರಿಗೆ ಏಳುಸೇರು

ಡಾ|| ಕೆ.ಜಿ.ಜಿ. ಮೂರ್ತಿ

ಸುಭಿಕ್ಷ ಕಾಲವದು. ಕಣ ಸುಗ್ಗಿ ಮುಗಿದು ಮುಂಗಾರು ಮಳೆ ಬರುವವರಿಗೆ ರೈತರಿಗೆ ವಿರಾಮಕಾಲ. ಹಳ್ಳಿಯ ಹುಡುಗರು ಬೇಸಿಗೆಯ ಸೆಕೆಯನ್ನು ಮರೆಯಲು ಗುಡಿಯ ಕಟ್ಟೆಯ ಮೇಲೆ ಕುಳಿತು ಹರಟುತ್ತಿದ್ದರು. ಅದೇ ತಾನೆ ಬೆಲ್ಲ ಮಾಡುವ ಕೆಲಸ ಮುಗಿದಿತ್ತು. ಊರಲ್ಲೆಲ್ಲಾ ಹೊಸ ಬೆಲ್ಲದ ವಾಸನೆ. ಒಬ್ಬ ಚಾಲೆಂಜ್ ಮಾಡಿದ 'ಯಾರು ಹೆಚ್ಚು ತಿನ್ನುತ್ತೀರಿ ಈ ಹೊಸಬೆಲ್ಲ' ಎಂದು. ಇನ್ನೊಬ್ಬ ಈ ಚಾಲೆಂಜ್ ತೆಗೆದು ಕೋರ್ಟಿನ ಧಾಟಿಯಲ್ಲಿ - ''ನಾನು ನಾಲ್ಕು ಸೇರು ತಿನ್ನುತ್ತೇನೆ' ಎಂದ ಮತ್ತೊಬ್ಬ ಕೊಚ್ಚಿಕೊಂಡ, 'ನಾನು ಐದು ಸೇರು ತಿನ್ನುತ್ತೇನೆ' ಎಂದು ಉಳಿದವರೆಂದರು ''ಐದು ಸೇರು ಬೆಲ್ಲವನ್ನು ನೀನು ನಡುವೆ ಏನೂ ತಿನ್ನದೆ, ನೀರು ಕುಡಿಯದೆ ತಿಂದರೆ ಬೆಲ್ಲದ ಬೆಲೆಯ ಜೊತೆಗೆ ನಿನಗೆ ಹತ್ತು ರೂಪಾಯಿ ಕೊಡುತ್ತೇನೆ'' ಎಂದು ಪಣಕಟ್ಟಿದ. ಬಿಸಿರಕ್ತದ ಎದುರಾಳಿಯೂ ಇದನ್ನು ಒಪ್ಪಿಕೊಂಡ.

ಅವರಲ್ಲಿ ಹಿರಿಯ ಹೇಳಿದ, 'ಇದು ಗುಡಿ ನಾಲ್ಕು ಜನ ಬಂದು ಹೋಗುವ ಜಾಗ. ಹಿರಿಯರು ಯಾರಾದರೂ ನೋಡಿದರೆ ಉಗಿಯುತ್ತಾರೆ. ಹೀಗ ಮಾಡುವ. ಇಲ್ಲೇ ಪಕ್ಕದಲ್ಲಿರುವ ಗೌಡರ ಎತ್ತಿನ ಮನೆಯಲ್ಲಿ ಈ ಜೂಜಿನ ಕಾಳಗ ನಡೆಯಲಿ' ಎಂದು ಒಪ್ಪಿಗೆ ನೀಡಿತು ಇನ್ನೊಂದು ಗುಂಪು. ಒಂದು ಗುಂಪು ಬೆಲ್ಲ ತರಲು ಅಂಗಡಿಗೆ ಹೋದರೆ, ಇನ್ನೊಂದು ಬಂದು ಗೌಡರ ಎತ್ತಿನ ಮನೆಯಲ್ಲಿ ಕುಳಿತಿತು.

ಮನಷ್ಯನ ದುಷ್ಟ ಬುದ್ಧಿ ಎಲ್ಲಿ ಹೋಗುತ್ತದೆ. ಜೊತೆಗೆ ಹೆಣ್ಣು, ಮಣ್ಣು ಹಾಗೂ ಹೊನ್ನನ್ನು ಯಾವಮಾರ್ಗದಲ್ಲಾದರೂ ಜಯಿಸಬಹುದು ಎಂಬ ಸುಯೂಕ್ತಿ ಬೇರೆ ಇದೆಯಲ್ಲಾ. ಅತ್ತ ಬೆಲ್ಲ ತರಲು ಹೋದವರು ಮಾತಾಡಿಕೊಂಡರು - 'ಅವನು ಸಿಹಿ ತಿನ್ನುವುದರಲ್ಲಿ ಬಕಾಸುರ. ಐದೇಕೆ, ಆರು ಸೇರುತಿನ್ನುತ್ತಾನೆ. ಆಗ ನಮ್ಮ ಹಣ ಹಾಗೂ ಮಾನ ಎರಡೂ ಹೋಗುತ್ತದೆ. ಅದಕ್ಕೆ ಹೀಗೆ ಮಾಡುವ. ಅಲ್ಲಿರುವ ಅವರಿಗೆ ಹೇಗೆ ತಿಳಿಯಬೇಕು. ಐದು ಸೇರಿನ ಬದಲಿಗೆ ಏಳು ಸೇರು ಬೆಲ್ಲ ಕೊಳ್ಳುವ. ಅದಿಷ್ಟನ್ನೂ ಅವನಿಂದ ತಿನ್ನಲು ಸಾಧ್ಯವೇ ಇಲ್ಲ. ಗೆದ್ದ ಹಣವನ್ನು ನಾವು ಮೂವರು ಹಂಚಿಕೊಳ್ಳುವ'' - ಎಂದು ಎಲ್ಲರೂ ಒಪ್ಪಿ ಏಳು ಸೇರು ಕೊಂಡರು.


ಇತ್ತ ಗೌಡರ ಎತ್ತಿನ ಮನೆಯಲ್ಲಿ ಕುಳಿತವರೂ ತಮ್ಮ ದುರ್ಬುದ್ಧಿ ಉಪಯೋಗಿಸಿ ತಮ್ಮದೂ ಒಂದು ಯೋಜನೆಯನ್ನು ತಯಾರಿಸಿದರು. ಒಬ್ಬ ಹೇಳಿದ, ''ನೋಡು, ಹೊಸಬೆಲ್ಲ ಬೇಸಿಗೆ ಬೇರೆ. ಜೊತೆಗೆ ನೆಂಚಿಗೆ, ನೀರು ಇಲ್ಲದೆ ಐದು ಸೇರು ಬೆಲ್ಲವನ್ನೂ ತಿನ್ನಲು ನಿನ್ನಂದ ಸಾಧ್ಯವಿಲ್ಲ. ಹೇಗೂ ಇಲ್ಲಿ ಕತ್ತಲಿದೆ

ನೆರಿಕೆಯೂ ಅಲ್ಲಲ್ಲಿ ಹರಿದಿದೆ. ನಾವು ಇಬ್ಬರೂ ನೆರಿಕೆಯ ಹಿಂದೆ ಅವಿತು ಕುಳಿತುಕೊಳ್ಳುತ್ತೇವೆ. ನಾವು ನಿನಗೆ ಹಿಂದಿನಿಂದ ತಿವಿದು ಸೌಗ್ನ್ಲ ಕೊಟ್ಟಾಗ ನಮಗೂ ಸ್ವಲ್ಪ ಸ್ವಲ್ಪ ಬೆಲ್ಲ ಕೊಡು. ಹೀಗೆ ಎಲ್ಲರೂ ಕೂಡಿ ತಿಂದರೆ ಮಾತ್ರ ಏಳೂಸೇರು ತಿನ್ನಬಹುದು. ಗೆದ್ದನಂತರ ಸಂದ ಹಣವನ್ನು ಎಲ್ಲರೂ ಸಮನಾಗಿ ಹಂಚಿಕೊಳ್ಳುವ'' ಎಂದರು.

''ಅವರು ಬಂದು ನೀವಿಬ್ಬರೂ ಎಲ್ಲಿ ಎಂದು ಕೇಳಿದರೆ?''

''ನೀವು ಬರುವುದು ತಡವಾಯಿತು. ನಿದ್ದೆ ಬರುತ್ತಿದೆ ಎಂದು ಮನೆಗೆ ಮಲಗಲು ಹೋದರು ಎಂದು ಹೇಳಿಬಿಡು'' ಎಂದು ಹೇಳಿ ಇಬ್ಬರೂ ಎದ್ದು ಬಂದು ಹಾವು, ಚೇಳು ಓಡಾಡುವ ಕತ್ತಲು ತುಂಬಿದ ನೆರಿಕೆಯ ಹಿಂದೆ ಕುಳಿತರು.

ಬೆಲ್ಲ ತಂದವರು ಮಬ್ಬುಗತ್ತಲಲ್ಲಿ ಒಬ್ಬನೇ ಕುಳಿತ ಎದುರಾಳಿಯನ್ನು ಹಿಯಾಳಿಸುವ ಧ್ವನಿಯಲ್ಲಿ - 'ಎಲ್ಲಿ ನಿನ್ನ ಬಳಗ. ಸೋಲು ಗ್ಯಾರಂಟಿ ಎಂದು ಹೆದರಿ ಓಡಿದರೆ' ಎಂದುದಕ್ಕೆ ಅವನಲ್ಲಿ ಸಿದ್ದವಿದ್ದ ಉತ್ತರ ಹೇಳಿ, ಬೆಲ್ಲದ ಗಂಟಿಗೆ ಕೈ ಹಾಕಿದ. ತಿಂದುದ್ದೇ ತಿಂದದ್ದು. ಬೆಲ್ಲ ಸವಯಲೊಲ್ಲದು. ಹೇಗೆ ಸವೆಯಬೇಕು - ಇದು ಐದಲ್ಲ, ಏಳುಸೇರು ಬೆಲ್ಲ. ನೆರಿಕೆಯ ಹಿಂದೆ ಕುಳಿತವರೂ ನಮಗೆ ಕೊಡು ಎಂದು ತಿವಿದದ್ದೇ ತಿವಿದದ್ದು. ಆದರೆ ಅವರಿಗೂ ಬೆಲ್ಲ ಸಿಗಲಿಲ್ಲ.



ಇವನ ದೇಶದ ನಾಯಕರು ತುಂಬಾ ಒಳ್ಳೆಯವರು. ಈ ದೇಶದ ಬಡತನ ನಿವಾರಣೇ ಅಂತ ಸ್ವಿಸ್ ಬ್ಯಾಂಕ್‌ಗಳಲ್ಲಿ ಬೇಕಾದಷ್ಟು ದುಡ್ಡು ಇಡ್ತಾ ಬಂದಿದಾರೆ.

ಸೆಲ್ ಫೋನ್ ಸಂವತ್ಸರ

ಎಂ.ಎಸ್.ಕೆ

ಹೋದವಾರ ಪೇಪರ್ಲೀ ಇತ್ತು. ಬೊಂಬಾಯಿ ಅಲ್ಲ ಅಲ್ಲ ಮುಂಬೈಲಿ ಲೋಕಲ್ ರೈಲಿಗೆ ಒಬ್ಬ ಮತ್ಸ್ಯ ಕನ್ಯೆ ಹತ್ತಿದಳಂತೆ. ಮೀನಿನ ಬುಟ್ಟೀನ ನೆಲದ ಮೇಲಿಟ್ಟು ಬುಟ್ಟಿ ಒಳಗೆ ಕೈ ಹಾಕಿ ಒಂದು ಸೆಲ್ ಫೋನ್ ತೆಗೆದು ನಂಬರ್‌ಗಳನ್ನು ಕುಟ್ಟಿ ಮರಾಠೀಲಿ ಪಟಪಟ ಮಾತಾಡಿ ಮತ್ತೆ ಅದನ್ನ ಬುಟ್ಟಿ ಒಳಗೆ ಇಟ್ಟಳಂತೆ. ಅಂತೆ ಕಂತೆ, ನಿಜವೋ ಸುಳ್ಳೋ ಗೊತ್ತಿಲ್ಲ. ನಿಜವಿದ್ದರೂ ಆಶ್ಚರ್ಯವೇನಿಲ್ಲಾ ಈ ಸೆಲ್ ಯುಗದಲ್ಲಿ.

ಈಗ ನಾವು ಈಶ್ವರ ಸಂವತ್ಸರದಲ್ಲಿದ್ದೇವೆ. ಇದು ಸೆಲ್ ಯುಗ. ಅರ್ಥಾತ್ ಸೆಲ್ ಫೋನ್ ಯುಗ. ಹೋದ ಧಾತ್ರಿ ಸಂವತ್ಸರ ಪೇಜರ್ ಯುಗ. ಆಗ ಯಾರು ನೋಡಿದರು ತಮ್ಮ ಬೆಲ್ಟ್ ಬಳಿ ಪೇಜರ್ ಸಿಕ್ಕಿಸಿಕೊಂಡು ಅದನ್ನು ಆಗಾಗ ನೋಡುತ್ತಾ ಬಿಗುಂ ಆಗಿ ಹೋಗುತ್ತಿದ್ದರು.

ಈಗ ನಡೆಯುತ್ತಿರುವುದು ಈಶ್ವರ ಸಂವತ್ಸರ. ಇದನ್ನು ಸೆಲ್ ಫೋನ್ ಸಂವತ್ಸರ ಅಂತಾನೂ ಕರೀಬಹುದು. ನಡೆಯುತ್ತೆ. ಭಾದಕವಿಲ್ಲ.

ಈ ಸೆಲ್ ಫೋನ್ ಆಭಾಸ ಅಷ್ಟಿಷ್ಟಲ್ಲ. ಭಾರೀ ತೊಂದರೇನೂ ಇದೆ.

ಟೀವೀಲಿ ನೋಡಿದ್ರಲ್ಲಾ ಆ ಅಡ್, ದೊಡ್ಡ ಹೋಟಲ್. ಸುಮಾರು ವಯಸ್ಕ. ಪಕ್ಕದ ಟೇಬಲ್ ಸುಂದರಿ ತನ್ನನ್ನೇ ಮಾತನಾಡಿಸುತ್ತಿದ್ದಾಳೇ ಎಂದು ತಿಳಿದು ತನ್ನ ಕೋಟನ್ನು ಸರಿಪಡಿಸಿಕೊಂಡು ಅವಳ ಬಳಿ ಹೋಗುತ್ತಾನೆ. ಅವಳು ತನ್ನ ಕಿವಿಯ ಬಳಿ ಇದ್ದ ಸೆಲ್ ಫೋನ್ ತೆಗೆಯುತ್ತಾ ''ಕಾಫಿ ತಾ'' ಎನ್ನುತ್ತಾಳೆ. ಇವನು ತಬ್ಬಿಬ್ಬಾಗಿ ದೂರದ ಟೇಬಲ್ಗೆ ಹೋಗಿ ಕೂಡುತ್ತಾನೆ.

ಇದರಲ್ಲಿ ಅವನದೇನೂ ತಪ್ಪಿಲ್ಲಾ. ಅವನಿಗೆ ಹೇಗೆ ತಿಳೀಬೇಕು ಅವಳ ಬಳಿ ಚಿಕ್ಕ ಸೆಲ್ ಫೋನಿದೇಂತ. ಒಬ್ಬ ಸುಂದರಿ ತನ್ನನ್ನು ಮಾತನಾಡಿಸಿದರೆ ಅದನ್ನು ನಿರ್ಲಕ್ಷಿಸುವಂತ ಅಸಭ್ಯನೇನಲ್ಲ ಆತ. ಸನ್ಯಾಸಿಯೇನಲ್ಲ. ಉಪ್ಪು ಖಾರಾ ತಿನ್ನುವ ಸಾಮಾನ್ಯ ಪುರುಷ.

ಮೊನ್ನೆ ನನಗೂ ಹೀಗೆ ಆಗಬೇಕೆ?. ಕ್ಯೂನಲ್ಲಿ ನಿಂತಿದ್ದೆ. ಒಂದು ಕೋಕಿಲ ವಾಣಿ ಹಿಂದಿನಿಂದ ಮಾತನಾಡಿದಂತಾಯ್ತು. ತಿರುಗಿ ನೋಡಿದೆ. ಆಕೆ ತನ್ನ ಕೈಯನ್ನು ಕಿವಿಯ ಮೇಲಿಟ್ಟು ಬೇರೆ ಯಾವುದೋ ಲೋಕದಲ್ಲಿದ್ದಳು. ಅವಳಾಯ್ತು ಅವಳ ಸೆಲ್ ಫೋನಾಯ್ತು. ಇಹ ಪ್ರಪಂಚದ ಪರಿವೆಯೇ ಇದ್ದಂತಿರಲಿಲ್ಲ. ಆಕೆ ಆ ಕ್ಯೂ ಉದ್ದಕ್ಕೂ ತನ್ನ ಸಂಭಾಷಣೆಯಲ್ಲಿ ತಲ್ಲೀನಳಾಗಿದ್ದಳು.

ಆಗೀಗ ಯಾರಾದರೂ ತಮ್ಮ ಕೈಯನ್ನು ಕಿವಿಯಮೇಲಿಟ್ಟು ಮಾತನಾಡಿಸಿದರೆ

ಸ್ವಲ್ಪ ಅನುಮಾನ ಬರುತ್ತೆ. ಇವರು ನನ್ನನ್ನು ಕೇಳುತ್ತಿದ್ದಾರೋ ಇಲ್ಲ ಸೆಲ್ ಲೋಕದಲ್ಲಿದ್ದಾರೋ ಅಂತ.

ಮೊನ್ನೆ ನನ್ನಾಕೆ ಕಿವಿಯಮೇಲೆ ಕೈ ಇಟ್ಟು " ಇಲ್ಲಿ ಸ್ವಲ್ಪ ಕೇಳಿ..." ಅಂತಿದ್ಲು. ನಾನು ನನ್ನ ಪಾಡಿಗೆ ಸುಮ್ಮನಿದ್ದೆ. ಅವಳು ಕೆರಳಿ "ಅಲ್ರಿ, ನಿಮ್ಮನ್ನೇ ಕೇಳ್ತಿರೋದು" ಅಂದ್ಳು. ನಾನು ಸುಮ್ಮನಿರಲಾರದೆ "ಹೌದಾ. ನಿನ್ನ ಕೈ ಕಿವಿಮೇಲಿತ್ತು. ಆದಕ್ಕೆ ನಾನೇನೂ ಸೆಲ್ ಫೋನಲ್ಲಿ ಮಾತಾಡ್ತಿದ್ದಿ ಅಂದ್ಕೊಂಡು ಬಿಟ್ಟೆ" ಅಂದ್ಬಿಟ್ಟೆ.

ಅವಳು ಕೆಂಡಾಮಂಡಲವಾಗಿ "ನಿಮಗೇನು ಹುಚ್ಚು ಗಿಚ್ಚು ಹಿಡಿದಿದ್ಯಾ?. ಸೆಲ್ ಫೋನಂತೆ ಸೆಲ್ಫೋನು. ಅದೆಲ್ಲಿಂದಾ ಬರ್ಬೇಕು ಈ ಮನೇಗೆ. ಇರೋ ಫೋನು ಕೆಟ್ಟು ಕೂತಿದೆ ಮೂರು ದಿನದಿಂದ. ಅದನ್ನ ರಿಪೇರಿ ಮಾಡ್ಸಿ ಅಂತ ಕೂಗೀ ಕೂಗೀ ನನ್ನ ಗಂಟಲು ಬಿದ್ದು ಹೋಯಿತು. ನನ್ನ ತಂಗೀರ ಜೊತೆ ಸರಿಯಾಗಿ ಮಾತಾಡಿ ಮೂರ್ದಿನಾ ಆಯ್ತು. ನಮ್ಮ ಲಂಚ್ ಕ್ಲಬ್ ಮೀಟಿಂಗ್‌ಗೆ ಸುಮಾರು ಜನ ಸೆಲ್ ಫೋನ್ ತರ್ತಾರೆ. ಜುಂ ಅಂತ ಅವರ ಫ್ರೆಂಡ್ಸ್ ಜೊತೆ ರಾತ್ರಿ ಪ್ರೋಗ್ರಾಂ ಡಿಸಕಸ್ ಮಾಡ್ತಿರ್ತಾರೆ. ನನಗೆಲ್ಲಿದೆ ಆ ಭಾಗ್ಯ. ಈ ಜನ್ಮದಲ್ಲಿ. ಬಿಡಿ.

ನನಗೆ ರಾತ್ರೀಯಿಂದ ಹಲ್ಲು ನೋವು, ವಿಪರೀತ. ತಡೆಯೋಕೆ ಆಗ್ತಿಲ್ಲ. ಬೇಗ ನಿಮ್ಮ ಸೆಲ್ ಫೋನ್ ಹುಚ್ಚು ಬಿಟ್ಟು ನನ್ನ ಯಾರಾದ್ರು ಡಾಕ್ಟರ್ ಹತ್ರ ಕರ್ಕೊಂಡು ಹೋಗಿ. ನಾನು ಕಿವಿ ಮೇಲೆ ಕೈ ಇಟ್ಟಿರೋದು ನೋವು ತಡಿಲಾರ್ದೆ. ಸೆಲ್ ಫೋನ್ ಎಲ್ಲಿಂದ ಬರ್ಬೇಕು?" ಅಂತ ದಬಾಯಿಸಿದ್ಲು.

"ಹೋಗ್ಲಿ ಬಿಡು ಮಾರಾಯ್ತಿ. ಹತ್ತಾರು ಸಲ ಆ ಟೀವಿ ಆಡ್ ನೋಡಿ ನೋಡಿ ತಲೆ ಕೆಟ್ಟಿರಬಹುದು. ಅದಕ್ಕೇ ನನಗೆ ಅನುಮಾನ ನಿನ್ನ ಕೈ ಕಿವಿಮೇಲೆ ಹೋದಾಗ. ಬೇಗ ಬಾ. ಹೋಗೋಣ ಡಾಕ್ಟರ್ ಹತ್ರ." ಅಂತ ಕರ್ಕೊಂಡು ಹೋದೆ.

ಈಗೀಗ ನಕಲೀ ಸೆಲ್ ಫೋನ್ಗಳೂ ಸಿಗುತ್ತವಂತೆ. ಬೆಲೆ ಬಹಳ ಸಸ್ತಾ. ನೋಡೋಕೆ ಥೇಟ್ ಸೆಲ್ ಫೋನೆ. ರಿಂಗ್ ಆಗುತ್ತೆ. ನಂಬರ್ಸ್ ಎಲ್ಲಾ ಇದೆ. ಆದರೆ ಮಾತಾಡೋದು ಬೇರೇಯವರಿಗೆ ಕೇಳಿಸಲ್ಲಾ ಅಷ್ಟೇ - ಸುತ್ತ ಮುತ್ತ ಇರೋರನ್ನ ಬಿಟ್ಟು!. ಒಬ್ಬ ಯುವ ಆಫಿಸರ್ ದಿನಾ ತನ್ನ ಆಫೀಸಿಗೆ ಲಿಫ್ಟ್ ಅಲ್ಲಿ ಹೋಗುವಾಗ ಅವನ ಸೆಲ್ ಫೋನ್ ರಿಂಗ್ ಆಗ್ತಾ ಇತ್ತು. ಇವನು ಫೋನ್ ಕಿವೀ ಮೇಲಿಟ್ಟು "ಬರ್ತಿದ್ದೀನಿ. ಬರ್ತಿದ್ದೀನಿ. ಸ್ವಲ್ಪ ತಡೀರಿ" ಅಂತಿದ್ದನಂತೆ. ಇದು ದಿನಾ ಆದಾಗ ಅಲ್ಲಿನೋರ್ಗೆ ಡೌಟ್ ಬಂದು ಅವನ ಆಫೀಸಿನಲ್ಲಿ ಗುಟ್ಟಾಗಿ ವಿಚಾರಿಸಿದರಂತೆ.

ಬೆಕ್ಕು ಬುಟ್ಟಿಯಿಂದ ಈಚೇಗೆ ಬಂತು. ಅವನ ಸೆಲ್ ಫೋನ್ ನಕಲೀಂತ!.

ತ್ರಿಮೂರ್ತಿಗಳ ರಿಟೈರ್ಮೆಂಟ್ ಪ್ಲಾನ್

- ಬೇಲೂರು ರಾಮಮೂರ್ತಿ

ಮಾರ್ಚ್ 8, 1997 - ಬೆಳಿಗ್ಗೆ ಆರುಗಂಟೆ,

ಕಾಮಾಕ್ಷಿ ವಠಾರದ ಶೀನಪ್ಪ, ಕಪಿನೀಪತಿ, ಗುರುಸ್ವಾಮಿ ಮೂವರೂ ಮಿರಿಂಡಾ ಕುಡಿದ ಬೋಡರು ಹ!ಹ!!ಹಾ!!! ಅನ್ನುವಂತೆ ಅವರವರ ಮನೆಯಿಂದನೇ ಗಹಗಹಿಗಿಸಿದರು.

ಅಜಾದಿ ದಿಲ್ ಕಿ ಅನ್ನುವ ಹಾಡನ್ನು ಗುನುಗಿದರು. ಅಜಾದಿ ಸಬ್‌ಕಿ ಅನ್ನುತ್ತಾ ಬಚ್ಚಲು ಮನೇಲಿ ಕುಣಿದರು.

ಇಂಥಾ ಹುಚ್ಚಾಟಕ್ಕೆಲ್ಲ ಕಾರಣ ಇರಬೇಕಲ್ಲ. ಇದ್ದೇ ಇದೆ. ಕಾಕತಾಳೀಯ ಅನ್ನುವಂತೆ ಮೂವರೂ ಹಿಂದಿನ ದಿನ ರಿಟೈರಾಗಿದ್ದರು. ಇಬ್ಬರು ಪ್ರೈವೇಟು ಒಬ್ಬರು ಗೌರ್ನಮೆಂಟ್ ಸರ್ವಿಸು ಮುಗಿಸಿದ್ದರು. ಸಾಕಪ್ಪಾ ಇಷ್ಟುವರ್ಷ ಇನ್ನೊಬ್ಬರ ಮನೆ ಚಾಕರಿ ಮಾಡೀಮಾಡೀ ಸುಸ್ತಾಗಿದೆ. ಇನ್ನಾದರೂ ಫ್ರೀ ಬರ್ಡ್‌ಗಳಾಗಿರೋಣ ಅಂತ ನಿರ್ಧರಿಸಿದ್ದರು ಆ ವಠಾರದಲ್ಲಿ ಸುಮಾರು ವರ್ಷಗಳಿಂದ ನೆಲೆಸಿದ್ದರಿಂದ, ಹಾಗೂ ಇಂಥಾ ದಿನ ರಿಟೈರ್ ಆಗ್ತೀವಿ ಅಂತ ಗೊತ್ತಿದ್ರಿಂದ ಎಲ್ಲಾ ಪ್ಲಾನ್ ಆಗಿತ್ತು.

ಬೆಳಿಗ್ಗೆ ಐದೂವರೆಗೆ ಎದ್ದು ಸುಮಾರು ಒಂದು ಗಂಟೆ ವಾಕಿಂಗು. ಆಮೇಲೆ ಮನೆಗೆ ಬಂದು ಪೇಪರು, ಕಾಫಿ, ಸ್ನಾನ ತಿಂಡಿ ಇತ್ಯಾದಿ. ಆಮೇಲೆ ಇನ್ನೊಂದು ರೌಂಡು. ದೇವಸ್ಥಾನದ ಜಗಲಿ, ಅರಳೀಕಟ್ಟೆ, ಗುಂಡಪ್ಪನ ಹೋಟ್ಲು ಹೀಗೆ ಒಂದೊಂದು ದಿನ ಒಂದೊಂದು ಕಡೆ ಕೂತು ಹರಟೆ ದೇಶದ ರಾಜಕೀಯ, ಕ್ರೀಡೆ, ಇವುಗಳ ಬಗ್ಗೆ ಚರ್ಚೆ. ಮಧ್ಯಾಹ್ನ ಊಟ, ನಿದ್ದೆ, ಸಂಜೆಗೆ ಇನ್ನೊಂದು ರೌಂಡು ಸುತ್ತಾಟ, ದಾರಿಸವೆಸೋಕೆ ಕಡ್ಲೆಕಾಯಿ. ಒಂದೊಂದು ದಿನ ಸಿಗರೇಟು. ಬೇಜರಾಯ್ತು ಅಂದ್ರೆ, ಸಿನಿಮಾ, ಮಳೆಗಾಲದ, ಛಳಿಗಾಲದ ದಿನಗಳಲ್ಲಿ ಖಾರಾ ಕಡ್ಲೆಕಾಯ ಬೀಜ, ಬಿಸಿಬಿಸಿ ಕಾಫಿ, ಜೊತೆಗೆ ಇಸ್ಪೀಟು ಬಡಿಯೋದು ಓಗೆ ಪ್ಲಾನೇನೋ ಸಖತ್ತಾಗಿ ಹಾಕಿದ್ರು.

''ಜೊತೆಗೆ ಒಂದ್ ರೂಮಿದ್ರೆ ಚನ್ನಾಗಿರುತ್ತೆ''

ಶೀನಪ್ಪ ಸಲಹೆ ಮಾಡಿದ

''ಯಾಕಪ್ಪ ರೂಮು, ಯಾರನ್ನ ಕರ್ಕೊಂಡು ಬರ್ತೀಯಾ''

ಪ್ರಶ್ನಿಸಿದ ಕಪಿನೀಪತಿ

''ಯಾರನ್ನ ಯಾಕೆ ಕರ್ಕೊಂಡು ಬರ್ಬೇಕು. ರೂಮಿದ್ರೆ ಯಾರ ತಾಪತ್ರಯಾನೂ ಇಲ್ದೆ ಇಸ್ಪೀಟು ಬಡೀಬಹುದಲ್ವ, ಜೊತೆಗೆ ಯಾವತ್ತಾದ್ರೂ ಒಂದೊಂದು ಕ್ಯಾಸೆಟ್

ಟಿವಿ ನೋಡಬಹುದು. ಬೇಕು ಅನಿಸಿದರೆ ಒಂದು ಚಿಲ್ಡ್ ಬೀರ್ ಹೊಡೀಬಹುದಲ್ವ''

ಗುರುಸ್ವಾಮಿ ಜೊಲ್ಲು ಸುರಿಸಿದ

''ಇಸ್ಪೀಟು , ಕ್ಯಾಸೆಟ್ಟು.... ಚಿಲ್ಡ ಬೀರ್ ಅಂದ್ರೆ ಗುರುಸ್ವಾಮಿಗೆ ತ್ರಿವೇಣಿ ಸಂಗಮ. ಇವುಗಳ ಬಗ್ಗೆ ಅನೇಕ ಸಾರಿ ಹೇಳಿದ್ದಾನೆ.

''ನೀ ಹೇಳೋದೇನೋ ಸರಿ ಆದ್ರೆ ಮನೇಲಿ ಗೊತ್ತಾದ್ರೆ ಎಕ್ಕಡ ತಗೋತಾರೆ'' ಶೀನಪ್ಪ ಎಚ್ಚರಿಸಿದ.

''ಮೊಮ್ಮಕ್ಕಳಾಗೋ ವಯಸ್ ಬಂದ್ರೂ ಮಕ್ಕಳ ಹಾಗೆ ಮಾತಾಡ್ತೀಯಲ್ಲ ಇಂಥಾ ಕೆಲಸಗಳನ್ನು ಯಾರಾದ್ರೂ ಹೇಳಿ ಕೇಳಿ ಮಾಡ್ತಾರಾ ಎಲ್ಲಾ ಗೋಪ್ಯ''

ಶಂಕ್ರಯ್ಯನೋರ ಮನೆ ರೂಮು ಸೆಟ್ಲ್ ಆಯ್ತು. ನೂರು ಬಾಡಿಗೆ ಐನೂರು ಅಡ್ವಾನ್ಸು. ಮೂರು ಜನರೂ ಸಮನಾಗಿ ಷೇರಿಸಿದರು.

ಎಲ್ಲ ವ್ಯವಸ್ಥೆ ಆಯ್ತು. ಮರುದಿನದಿಂದಲೇ ಕಾರ್ಯಕ್ರಮ ಪ್ರಾರಂಭ. ಶೀನಪ್ಪನೇ ಪ್ರೋಗ್ರಾಂ ತಯಾರಿ ಮಾಡಿ ಕೊಟ್ಟಿದ್ದ.

ಆದ್ರೆ ಮ್ಯಾನ್ ಪ್ರಪೋಸಸ್ ವುಮನ್ ಡಿಸ್‌ಪೋಸಸ್ ಆಗ್ಹೋಯ್ತು ರಿಟೈರ್‌ಮೆಂಟನ್ನು ಹ್ಯಾಗೆ ಅವರ ಮನೆಯವರೂ ಪ್ಲಾನ್ ಮಾಡಿದ್ದರು. ಅಟ್ಯಾಕ್ ಅಂದ್ರೆ ಅದು ಐಡೆಂಟಿಕಲ್ ಅಟ್ಯಾಕ್. ಹೇಳಿ ಮಾಡಿಸಿದ ಹಾಗೆ.

ಮರುದಿನ ಶೀನಪ್ಪ ಇನ್ನೇನು ವಾಕಿಂಗ್ ಹೋಗಬೇಕು ಅಷ್ಟರಲ್ಲಿ ಮಡದಿಯ ಗುಡುಗು ''ರೀ ಮಕ್ಕಳು ಬೇಗ ಕಾಲೇಜಿಗೆ ಹೋಗಬೇಕಂತೆ ಒಲೆ ಉರಿಹಾಕಿ'' ಹೆಂಡ್ತಿ ಮಾತೂಂದ್ರೆ ಮೀರೋಕಾಗುತ್ಯೆ ಅದೂ ರಿಟೈರಾದ ಮೇಲೆ. ಶೀನಪ್ಪ ಮುಖ, ಮೂತೀನೆಲ್ಲ ಮನೆ ಮಾಡ್ಕೊಂಡು ಒಲೆ ಉರಿಹಾಕಿ, ಊದೂ ಕೊಳವೆಯಿಂದ ಒಲೆ ಊದಿ ಕಣ್ಣುಕೆಂಪು ಮಾಡಿಕೊಂಡ. ಅದು ಮುಗಿದದ್ದೇ ತಡ ಚೊಂಬು ಕೈಲಿ ಕೊಟ್ಟು ''ಹಾಲು ತಗೊಂಡ್ ಬನ್ನಿ'' ಅನ್ನೊ ಆದೇಶ. ಅದಾದ ಮೇಲೆ ಪೇಪರ್ ಕೈಲಿ ಹಿಡಿಸ ಕೂತರೆ ಪೇಪರ್ ಕಿತ್ ಬಿಸಾಕಿ ''ದಿನಾ ಎಲ್ಲ ಪೇಪರ್ರೂ ಮನ್ಲೇ ಇರುತ್ತೆ ನೀವೂ ಮನ್ಲೇ ಇರ್ತೀರಿ ಅದಿಕ್ಕೇನು ಅರ್ಜಂಟು ಬನ್ನಿ ಒಂಚೂರು ತರಕಾರಿ ಹೆಚ್ಚಿಕೊಡಿ'' ಅಂತ ದುಂಬಾಲು. ಅಂತೂ ಶೀನಪ್ಪ ಮಧ್ಯಾನ್ಹದ ವರೆಗೇ ಸುಸ್ತು ಪಕ್ಕದ ಮನೆಯ ಗುರುಸ್ವಾಮಿಯನ್ನಾಗಲೀ, ಎದುರು ಮನೆ ಕಪಿನೀಪತಿಯನ್ನಾಗಲೀ ಮಾತಾಡಿಸಲಾಗದಷ್ಟು ಬಿಸಿ. ಅವರಿಬ್ಬರ ಹಣೆಪಾಡೂ ಇದಕ್ಕಿಂತ ಬೇರೆಯಾಗಿರಲಿಲ್ಲ. ಮೂರು ಜನಕ್ಕೂ ರಿಟೈರಾದ ಮೊದಲನೇ ದಿನದ ನೋವನ್ನು ತೋಡಿಕೊಳ್ಳೋ ತವಕ. ಆದರೆ ಹೆಂಡತಿಯರು ಒಂಚೂರು ಪುರುಸೊತ್ತು ಕೊಡ್ತಿರಲಿಲ್ಲ.

ಸಂಜೆಗೆ ಗುರುಸ್ವಾಮಿ ಹೆಂಡ್ತಿ ಪಾತಕ್ಕ ಮನೆ ಮುಂದೆ ಅವರೇಕಾಯಿ ಅಂತ ಕೂಕ್ಕೊಂಡು ಹೋಗ್ತಿದ್ದವ್ನ ಕರೆದು ಎಷ್ಟಪ್ಪ ಕೇಜಿ ಅಂತ ಕೇಳಿ ಅವನು ಹನ್ನೆರಡು ಅಂದ್ರೆ ಹತ್ತು ಮಾಡ್ಕೊ ಅಂತ್ಹೇಳಿ ಐದು ಕೇಜಿ ತೂಗಿಸಿಕೊಂಡಳು. ಇಷ್ಟೊಂದ್ಯಾಕೆ ಪಾತು ಅಂತ ಗುರುಸ್ವಾಮಿ ಕೇಳಿದ್ದಕ್ಕೆ ಮಕ್ಕಳಿಗೆ ಅವರೇಕಾಯಿ ಅಂದ್ರೆ ಇಷ್ಟ. ಉಪ್ಪಿಟ್ಟು, ರೊಟ್ಟಿ ಹಿಸಕವರೇ ಹಿಸಕವರೇಕಾಯಿ ತೊವ್ವೆ, ಬಿಸಿಬೇಳೆ ಬಾತು ಎಲ್ಲ

ಮಾಡೋಣಾಂತ ಅಂದಳು ಹೆಂಡ್ತಿ ಏನೇ ಆದ್ರೂ ಪಾಕ ಪ್ರವೀಣೆ ರುಚಿರುಚಿಯಾಗಿ ಮಾಡಿ ಹಾಕ್ತಾಳೆ. ''ಒಂದ್ಕೆಲ್ಸ ಮಾಡು ಕೆಲಸದವಳಿಗೆ ಟೀವಿ ಮುಂದೆ ಕುಕ್ಕರ್‌ಬಡ್ಕೊಂಡು ಸುಲೀಂತ ಹೇಳು'' ಅಂತ ಸಲಹೆ ಕೊಟ್ಟರು ಗುರುಸ್ವಾಮಿ. ಅವರೇಕಾಯಿ ಯಾರ್ಹತ್ರ ಸಲಿಸಬೇಕು ಅಂತ ಪಾತಕ್ಕ ನಿರ್ಧಾರ ಮಾಡಿಯೇ ಇದ್ದಳು ''ಒಂದ್ ರೊಟ್ಟಿನೋ ಒಂದಿಷ್ಟು ಉಪ್ಪಿಟ್ಟೋ ಕೊಟ್ರಾಯ್ತು ನಿಮ್ಮ ಸ್ನೇಹಿತರನ್ನು ಕರೆದು ಜೊತೇಲಿ ಸುಲೀರಿ'' ಅಂದಳು ಪಾತಕ್ಕ. ರಿಟೈರಾದ ಮೂವರು ಹೀಗೆ ಕಾರ್ಯಮಗ್ನರಾಗಿದ್ದನ್ನು ಕಂಡು ಅವರವರ ಮನೆಯವರೂ ಹೀಗೆ ಇವರಿಗೆ ಒಟ್ಟೊಟ್ಟಿಗೇ ಕೆಲಸ ಕೊಡೋಣ ಅಂದ್ಕೊಂಡ್ರು.

ಏನಿದೀ ಗ್ರಹಚಾರವೋ ಅಂತ ಹಣೆ ಚಚ್ಚಿಕೊಂಡರು. ಒಬ್ಬೊಬ್ಬರ ಮನೇಲಿ ಒಂದೊಂದು ಕಡೆ. ರಿಟೈರ್‌ಮೆಂಟ್ ಪ್ಲಾನೆಲ್ಲ ತೋಪಡಾ ಹೊಡ್ಕೊಂಡು ಹೋಯ್ತು. ಆದರೆ ಒಬ್ಬರ ಕಷ್ಟಕ್ಕೆ ಇನ್ನೊಬ್ಬರು ಆದರು ಹೀಗಾಗಿ ಕಷ್ಟ ಬೆಳ್ಕೊಂಡ್ ಹೋಯ್ತು.

ಶಂಕ್ರಯ್ನೋರ ಮನೆ ರೂಮು ಮಾಡಿದ್ದು ದಂಡವಾಯ್ತು. ಕಾರ್ಡು, ಕ್ಯಾಸೆಟ್ಟು, ಚಿಲ್ಡ್ ಬೀರ್ ಪ್ರೋಗ್ರಾಂ ಕೊಚ್ಕೊಂಡ್ ಹೋಯ್ತು.

ಇಷ್ಟೆಲ್ಲ ಸಾಲ್ದು ಅನ್ನುವಂತೆ ಕಪಿನೀಪತಿ ಹೆಂಡ್ತಿ ಸುಬ್ಬಮ್ಮ ಪಕ್ಕದ ಮನೆಯವರ್ಹತ್ರ ಕೊಚ್ಕೊತಾ ಇದ್ಲು. ಏನಂದ್ರೆ ''ನೋಡ್ರಿ ಇವರಿಗೆ ರಿಟೈರಾಗಿದ್ರಿಂದ ನಾನೊಂದು ಚೂರು ಉಸಿರಾಡೋ ಹಾಗಾಯ್ತು. ನಾನಂತೂ ನಮ್ಮನೆಯವರನ್ನ ಎಲ್ಲೂ ಕಳಿಸಲ್ಲ. ಹಾಗೇನಾದ್ರೂ ಹೊರಗಡೆ ಹೋಗಬೇಕಾಗಿ ಬಂದ್ರೆ ನಾನೇ ಹೋಗ್ತೀನಿ'' ಅಂತ.

ಅದು ನಿಜವೇ ತರಕಾರಿ, ಷಾಪಿಂಗ್ ಅದೂ ಇದೂ ಅಂತ ಪಾತಕ್ಕ, ಸುಬ್ಬಮ್ಮ, ಗೌರಮ್ಮ ಹೊರಗೆ ಹೊರಟರೆ ಅವರುಗಳು ವಾಪಾಸ್ ಬರೋತನಕ ಗುರುಸ್ವಾಮಿ, ಕಪಿನೀಪತಿ, ಶೀನಪ್ಪ ಅವರವರ ಮನೆ ಮುಂದೆ ನಿಂತು ಕರ್ಮ ತೋಡಿಕೊಳ್ಳುತ್ತಿದ್ದರು.

ಹಾಳಾದ್ದು ರಿಟೈರಾಗ್ಲೆಬಾರ್ದಿತ್ತು... ಹುಲಿ ತರಾನೇ ಇರಬಹುದಿತ್ತು. ಇದೊಳ್ಳೆ ಗ್ರಹಚಾರ ಆಯ್ತಲ್ಲ ಅಂತ ಹಣೆ ಹಣೆ ಚಚ್ಚಿಕೊಂಡರು.

ಆದರೂ ಮರಳಿ ಯತ್ನವ ಮಾಡು ಅನ್ನುವಂತೆ ಶೀನಪ್ಪ ಶಿರಿಯಸ್ಸಾಗಿ ಥಿಂಕ್ ಮಾಡ್ತಾನೆ ಇದಾನೆ. ಹಾವೂ ಸಾಯಬಾರದು ಕೋಲೂ ಮುರಿಯಬಾರದು. ಅನ್ನೋಹಾಗೆ - ಬೆಣ್ಣೆ ಮೇಲಿನ ಕೂದಲು ತೆಗೆದ ಹಾಗೆ - ಬೆಟ್ಟದಷ್ಟು ಸಮಸ್ಯೆ ಮಂಜಿನ ಹಾಗೆ ಕರಗಿ ಹೋಗೋ ಹಾಗೆ, - ಅಕ್ಕೀನೂ ಖರ್ಚಾಗಬಾರ್ದು ಅಕ್ಕನ ಮಕ್ಕಳೂ ಬಡವಾಗಬಾರ್ದು ಅನ್ನೋಹಾಗೆ - ಇನ್ನೂ ಹೇಗ್ಹೇಗೋ - ಒಟ್ನಲ್ಲಿ ಆಜಾದಿ ಹಮ್ ಸಬ್‌ಕಿ ಅನ್ನೋಹಾಗಾಗಬೇಕು.

ಗುರುಸ್ವಾಮಿ, ಶೀನಪ್ಪ, ಕಪಿನೀಪತಿ ಸೀರಿಯಸ್ಸಾಗಿ ಥಿಂಕ್ ಮಾಡ್ತಾ ಮಾಸ್ಟರ್ ಪ್ಲಾನ್ ಹಾಕ್ತಿದಾರೆ

ನಾವೆಲ್ಲ ಸೇರಿ ಅವರಿಗೆ ಬೆಸ್ಟ್ ಆಫ್ ಲಕ್ ಹೇಳೋಣ ಆ ಲಕ್ ನಮಗೂ ಇರ್ಲಿ.

ಯಾಕಂದ್ರೆ, ನಾ ಒಂದು ದಿನ ರಿಟೈರ್ ಆಗ್ತೀವಲ್ಲ!

Printed by V.R. NATH for the Publisher M. SHIVAKUMAR, Published and owned by M. SHIVA KUMAR. 36. 6th Main Road, Malleswaram, Bangalore-560 00ˇ Printed at IMPRESSIONS. 404. Sampige Road, Malleswaram, Bangalore-560 003. Editor : M. SHIVAKUMAR.